UNIVERSAL
LIBRARY
OU_198461
UNIVERSAL
LIBRARY

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ — ೧೪

# ನಮ್ಮ ಆರ್ಥಿಕ ದೃಷ್ಟಿ

ಎನ್ ಗೋಪಾಲಸ್ವಾಮಿ, ಎಂ ಎ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

ಮೈಸೂರು

೧೯೪೦

ಶ್ರೀ ಸಾ ು ಪ್ರ ಕೈ —ಮೊದಲನೆಯ ಮುದ್ರಣ, ೨೦೦೫ ಪ್ರತಿಗಳು
೬-೫-೧೯೪೦

# ಮುನ್ನುಡಿ

ಮೈಸೂರು ವಿಶ್ವವಿದ್ಯಾನಿಲಯದ ಚಾನ್ಸಲರವರಾದ ಆಳುವ ಮಹಾಸ್ವಾಮಿಯವರು ಮೊದಲನೆಯ ಸೆನೆಟ್ ಸಭೆಯ ಪ್ರಾರಂಭೋತ್ಸವದ ಭಾಷಣದಲ್ಲಿಯೂ, ಪುನಃ ಮೊದಲನೆಯ ಕಾನ್ವೊಕೇಷನ್ ಮಹೋತ್ಸವದ ಭಾಷಣದಲ್ಲಿಯೂ ವಿಶ್ವವಿದ್ಯಾನಿಲಯದ ಪಾಲಿಗೆ ಹಲವು ಕರ್ತವ್ಯಗಳನ್ನು ಆಜ್ಞೆ ಮಾಡಿದರು. ಅವುಗಳಲ್ಲಿ ವಿಶೇಷವಾದವು ಇವೆರಡು: ಒಳ್ಳೆಯ ಕನ್ನಡದಲ್ಲಿ ಬರೆದ ಪುಸ್ತಕಗಳ ಪ್ರಕಟನೆ, ಹಾಗೂ ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ; ಮತ್ತು ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಯಾರು ಕಾರಣಾಂತರಗಳಿಂದ ಕ್ರಮಬದ್ಧವಾದ ಶಿಕ್ಷಣಶಿಸ್ತುಗಳಲ್ಲಿ ಭಾಗವಹಿಸಿ ಪರೀಕ್ಷೆಗಳಿಗೆ ಕೂಡಲು ಶಕ್ತರಲ್ಲವೋ ಅಂಥವರಲ್ಲಿ ಜ್ಞಾನಪ್ರಸಾರ ಮಾಡುವುದು, ಅಲ್ಲದೆ ಮೈಸೂರು, ಬೆಂಗಳೂರು ಈ ಎರಡು ಹಿರಿಯ ಪಟ್ಟಣಗಳಲ್ಲಿ ದೊರಕುವ ವಿದ್ಯಾಭ್ಯಾಸಾನುಕೂಲ್ಯಗಳನ್ನು ಪಡೆದಿಲ್ಲದ, ಸಂಸ್ಥಾನದ ದೂರಪ್ರದೇಶಗಳಲ್ಲಿ ವಾಸಿಸುವ ಜನರಲ್ಲಿ ಉಚ್ಚ ವರ್ಗದ ಸಂಸ್ಕೃತಿಯನ್ನು ಹರಡುವುದು.

ಈ ಇಪ್ಪತ್ತುಮೂರು ವರ್ಷಗಳಿಂದಲೂ ವಿಶ್ವವಿದ್ಯಾನಿಲಯವು ಈ ಎರಡು ಮುಖ್ಯ ಧ್ಯೇಯಗಳನ್ನು ತನ್ನ ಮುಂದೆ ಸ್ಪಷ್ಟ ನಿಲ್ಲಿಸಿಕೊಂಡಿದೆ. ಅದರ ಕನ್ನಡ ಪ್ರಕಟನ ಕಾರ್ಯವು ಕೆಲವು ಪ್ರಸಿದ್ಧ ಹಳಗನ್ನಡ ಕಾವ್ಯಗಳನ್ನು ಎಚ್ಚರಿಕೆಯಿಂದ ಸಂಸ್ಕರಿಸಿ ಅಚ್ಚು ಹಾಕಿಸಿದೆ. ಅಲ್ಲದೆ, ಸಾಹಿತ್ಯ ವಿಜ್ಞಾನ ವಿಷಯಗಳನ್ನು ಕುರಿತ ಕೆಲವು ಲಘು ಪುಸ್ತಕಗಳನ್ನೂ ಹೊರತಂದಿದೆ. ಪ್ರಚಾರೋಪನ್ಯಾಸ ಸಮಿತಿಯವರು ಸಂಸ್ಥಾನದ ಎಲ್ಲ ಭಾಗಗಳ ಅನೇಕ ಕೇಂದ್ರಗಳಲ್ಲಿ ಹೆಚ್ಚಾಗಿ ಕನ್ನಡದಲ್ಲಿಯೇ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದಾರೆ.

ಇತ್ತೀಚೆಗೆ ಒಂದು ಫಲದಾಯಕವಾದ ಕಾರ್ಯಕ್ರಮ ಬೆಳೆದು ಬರುತ್ತಿದೆ. ವಿಷಯ ಒಂದೊಂದಕ್ಕೆ ಒಂದೊಂದರಂತೆ ಬಿಡಿ ಉಪನ್ಯಾಸ

ವನ್ನು ಕೊಡಿಸುವುದರ ಜೊತೆಗೆ, ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದ ಸಹಕಾರದಿಂದ ಸಂಸ್ಕೃತಿ ಸಪ್ತಾಹಗಳೆಂದು ಈಗಾಗಲೇ ಕರೆಯಲ್ಪಡುತ್ತಿರುವ ಉಪನ್ಯಾಸಮಾಲೆಗಳನ್ನು ನಡಿಸಲಾಗುತ್ತಿದೆ ಒಂದೇ ಊರಿನಲ್ಲಿ ಐದಾರು ದಿನ ಭಾಷಣ ಕಾವ್ಯವಾಚನ ಸಂಗೀತಾದಿಗಳು ಜರುಗುತ್ತವೆ, ಉಪನ್ಯಾಸಗಳು ಸಾಹಿತ್ಯ ವಿಜ್ಞಾನ ಸಮಾಜ ವಲ್ಲಕ್ಕೂ ಸಂಬಂಧಿಸಿರುತ್ತವೆ ಈ ಸಪ್ತಾಹಗಳು ನೆರವೇರಿದ ದೊಡ್ಡಬಳ್ಳಾಪುರ, ದಾವಣಗೆರೆ, ಕೋಲಾರ ಮುಂತಾದ ಎಲ್ಲ ಕಡೆಗಳಿಂದಲೂ ಅವಕ್ಕೆ ಬಹಳ ಮನ್ನಣೆ ದೊರೆತಿದೆ

ಈಗ ಅತಿ ಹೊಸದಾದ ಏರ್ಪಾಡಾವುದೆಂದರೆ ಒಂದೆರಡು ಊರುಗಳನ್ನು ಆರಿಸಿಕೊಂಡು, ಅಲ್ಲಿಗೆ ಒಂದು ವರ್ಷದಲ್ಲಿ ಹಲವು ಬಾರಿ ಹೋಗಿ, ಕೆಲವು ವಿಷಯಗಳಲ್ಲಿ ಒಂದೊಂದನ್ನೂ ಕುರಿತು ನಾಲ್ಕಾರು ಉಪನ್ಯಾಸಗಳನ್ನು ಹೇಳುವ ಯೋಜನೆ ಆದರಿಂದ ಆ ಊರುಗಳ ಜನರಿಗೆ ಅನಲ್ಪಕಾಲ ಎಡೆಬಿಡದ ಜ್ಞಾನಬೋಧ ಸಿಕ್ಕುವುದು ಪ್ರತ್ಯಕ್ಷ ಕೇಳಿ ಉಪಯೋಗ ಪಡೆದ ಸಭಿಕರ ಗುಂಪಿನಿಂದ ಆಚೆಗೂ ಕೂಡ ಈ ಭಾಷಣಮಾಲೆಗಳ ಪ್ರಯೋಜನ ಹರಡಲೆಂಬ ಉದ್ದೇಶದಿಂದ ಅವುಗಳನ್ನು ಈ ರೀತಿ ಚಿಕ್ಕ ಹೊತ್ತಗೆಗಳಾಗಿ ಪ್ರಕಟಿಸಿದೆ

ನಮ್ಮ ಘನ ಪ್ರಭುಗಳವರು ನಮ್ಮ ವಿಶ್ವವಿದ್ಯಾನಿಲಯಕ್ಕೆ ಎರಡು ಪವಿತ್ರ ಕರ್ತವ್ಯಗಳನ್ನು ನೇಮಿಸಿರುವರಷ್ಟೆ ಸುಲಭ ಸಮಂಜಸ ಕನ್ನಡದಲ್ಲಿ ರಚಿಸಿದ ಗ್ರಂಥಗಳ ಪ್ರಕಟನೆ, ಜನತೆಯಲ್ಲಿ ಉತ್ತಮ ಬಗೆಯ ಸಂಸ್ಕೃತಿಯ ಪ್ರಸಾರ ಆ ಎರಡು ಕರ್ತವ್ಯಗಳನ್ನೂ ಈ ಮಾರ್ಗವಾಗಿ ಒಂದೇ ಸಾರಿ ಸಾಧಿಸಬಹುದೆಂಬುದೇ ಹೀಗೆ ಉಪನ್ಯಾಸಗಳನ್ನು ಕೊಟ್ಟು, ಲಘು ಪುಸ್ತಕಗಳನ್ನು ಸಿದ್ಧಮಾಡಿದವರ ನಿರೀಕ್ಷೆ ಮತ್ತು ಹೆಬ್ಬಯಕೆ

ವಿಶ್ವವಿದ್ಯಾನಿಲಯ, ಮೈಸೂರು,
೨೯—೫—೧೯೩೯

ಎನ್. ಎಸ್. ಸುಬ್ಬರಾವ್.

## ಬಿನ್ನಹ

ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದ ಆಶ್ರಯದಲ್ಲಿ ನಾನು ಶಿವಮೊಗ್ಗೆಯಲ್ಲೂ ಕೋಲಾರದಲ್ಲೂ ಕೊಟ್ಟ ಉಪನ್ಯಾಸಗಳ ಆಧಾರದ ಮೇಲೆ ಬರೆದ ಲೇಖನವಿದು ಇದರ ಹಸ್ತಪ್ರತಿಯನ್ನು ನನ್ನೊಡನೆ ಓದಿ ನನಗೆ ಸಲಹೆಗಳನ್ನಿತ್ತು ಸಹಾಯಮಾಡಿದ ನನ್ನ ಜತೆಕೆಲಸದವರಾದ ಶ್ರೀಮಾನ್ ಜಿ ಎನ್ ಕೃಷ್ಣಮೂರ್ತಿ, ಎಂ ಎ ಅವರಿಗೆ ನನ್ನ ಸ್ನೇಹ ಪೂರ್ವಕ ವಂದನೆಗಳು ಸಲ್ಲತಕ್ಕದ್ದಾಗಿದೆ

ಬೆಂಗಳೂರು,
25 ನೆಯ ಮಾರ್ಚಿ 1940.

ಎಸ್ ಜಿ

# ವಿಷಯಾನುಕ್ರಮಣಿಕೆ


| | | |
|---|---|---|
| ೧ | ಆರ್ಥಿಕ ಜೀವನದ ಬೆಳವಣಿಗೆ | ೧ |
| ೨ | ನಮ್ಮ ದೇಶದ ಪರಿಸ್ಥಿತಿ | ೧೦ |
| ೩ | ಪರಿಹಾರ ಸಾಧನಗಳು | ೨೩ |
| ೪ | ಏಳಿಗೆಯ ಮಾರ್ಗ | ೩೩ |
| ೫ | ಅಭಿವೃದ್ಧಿಯ ಕುರುಹುಗಳು | ೪೪ |
| ೬ | ಮೈಸೂರಿನ ಪ್ರಗತಿ | ೫೪ |
| ೭ | ಉಪಸಂಹಾರ | ೬೨ |

# ನಮ್ಮ ಆರ್ಥಿಕ ದೃಷ್ಟಿ

## ೧. ಆರ್ಥಿಕಜೀವನದ ಬೆಳವಣಿಗೆ

ನಮ್ಮ ಪುರುಷಾರ್ಥ ಸಾಧನೆಗೆ ಅಧಿಕವಾದ ಐಶ್ವರ್ಯ ಬೇಡವಾದರೂ ಸುಖಮಯವಾದ ಬಾಳಿಗೆ ಸಾಕಾದಷ್ಟು ಸಂಪತ್ತು ಅತ್ಯಾವಶ್ಯಕ ಕೊರತೆ ಇಲ್ಲದ ಜೀವನ ಮಾಡಲು ಬೇಕಾಗುವಷ್ಟು ಆರ್ಥಿಕ ಉಪಪತ್ತಿಯಿಲ್ಲದಿದ್ದರೆ ಕೆಲಸ ಮಾಡಲು ಗಟ್ಟಿಮುಟ್ಟಾದ ದೇಹವಾಗಲಿ, ಜೀವನದ ಧ್ಯೇಯಗಳನ್ನು ಸಾಧಿಸಲು ಬೇಕಾದ ಸ್ವಾತಂತ್ರ್ಯಾಪೇಕ್ಷೆಯಾಗಲಿ ಸಾಧ್ಯವಿಲ್ಲ ಹೊಟ್ಟೆ ತಂಪಾಗಿದ್ದರೆ ಬುದ್ಧಿ ಚುರುಕಾಗಿರುವುದು, ಸಾಕಾದಷ್ಟು ಧನವಿದ್ದರೆ ಜೀವನದ ನಾನಾ ಉದ್ಯಮಗಳಲ್ಲಿ ಹುರುಪು ಹುಟ್ಟಲು ಅವಕಾಶವಾಗುವುದು ಕಾಮವನ್ನೇ ಆಗಲಿ ಧರ್ಮವನ್ನೇ ಆಗಲಿ, ಯಾವುದನ್ನು ಸಾಧಿಸಬೇಕಾದರೂ ಅವೆರಡರ ಅಸ್ತಿಭಾರವಾಗಿ ಅರ್ಥವಿದ್ದೇ ಇರಬೇಕು ರಾಜಕೀಯ ಜೀವನ ಬೇಕಾಗಲಿ ಧಾರ್ಮಿಕ ಜೀವನ ಬೇಕಾಗಲಿ ಸಾಮಾಜಿಕ ಜೀವನ ಬೇಕಾಗಲಿ, ಅವೆಲ್ಲಕ್ಕೂ ಆರ್ಥಿಕ ಜೀವನ ಮೊದಲನೆಯ ಹಂತ

ನಮ್ಮ ನಾಗರಿಕ ಜೀವನಕ್ಕೂ ಆರ್ಥಿಕ ಜೀವನಕ್ಕೂ ಅತಿ ನಿಕಟವಾದ ಸಂಬಂಧವಿದೆ, ಒಂದು ಬೆಳೆದ ಹೊರತು ಇನ್ನೊಂದು ಬೆಳೆಯುವುದಿಲ್ಲ ನಮ್ಮ ಸಮಾಜಜೀವನ ವಿಸ್ತರಿಸಿದ ಹಾಗೆಲ್ಲಾ ನಮ್ಮ ಆರ್ಥಿಕಜೀವನವೂ ವಿಸ್ತರಿಸುವುದು, ಜನರ ಪರಸ್ಪರ ಆರ್ಥಿಕ ಸಂಬಂಧಗಳೂ ಹೆಚ್ಚುವುವು ಜೀವನ ಸರಳವಾಗಿದ್ದಾಗ ಅರ್ಥಾರ್ಜನೆಯ ಪ್ರಯತ್ನಗಳು ಸುಲಭವಾಗಿದ್ದುವು ಅನಾಗರಿಕ ದಶೆಯಲ್ಲಿ ಮಾನವನಿಗೆ ಹಸಿ

ಯಾದ ಆಹಾರ, ಹಿತವಾದ ಉಡುಪು, ಮತ್ತು ಸ್ವೈರವಾಗಿರುವಷ್ಟು ವಸತಿ, ಇದ್ದರೆ ಸಾಕಾಗಿತ್ತು ಅವಕ್ಕಾಗಿ ಅವನು ಹೆಚ್ಚಾಗಿ ದುಡಿಯಬೇಕಾದುದೂ ಇರಲಿಲ್ಲ, ಅಲ್ಲದೆ ಅವುಗಳನ್ನು ಪಡೆಯಲು ಬೇರೆ ಬೇರೆ ಕಸಬಿನ ಜನರೂ ಬೇಕಾಗಿರಲಿಲ್ಲ ಒಂದು ಕುಟುಂಬಕ್ಕೆ ಅಥವಾ ಒಂದು ಗುಂಪಿಗೆ ಸೇರಿದ ಜನರೇ ತಮ್ಮ ಜೀವನಕ್ಕೆ ಬೇಕಾದುದನ್ನೆಲ್ಲಾ ಒದಗಿಸಿಕೊಳ್ಳುತ್ತಿದ್ದರು ಕುಟುಂಬಗಳೂ ಗುಂಪುಗಳೂ ಬೆಳೆದ ಹಾಗೆಲ್ಲಾ ಪರಿಸ್ಥಿತಿ ಬದಲಾಯಿಸಿ ಕ್ರಮೇಣ ಹಲವು ಸಂಸಾರಗಳು ಪರಸ್ಪರ ಬೆಂಬಲದಿಂದ ಜೀವನ ಮಾಡುವುದು ರೂಢಿಗೆ ಬಂತು ಇನ್ನೂ ಕೊಂಚ ಕಾಲದ ಮೇಲೆ ಜೀವನ ಸೌಕರ್ಯಗಳನ್ನೂ ರಕ್ಷಣಾ ಸೌಕರ್ಯಗಳನ್ನೂ ಹೆಚ್ಚಿಸಿಕೊಳ್ಳಲು ಹಲವು ಹಳ್ಳಿಗಳೂ ದೇಶದ ಬೇರೆ ಬೇರೆ ಪ್ರಾಂತ್ಯಗಳೂ ಸೇರಿ ಸಹಕರಿಸಿ ಜೀವಿಸುವಂತಾಯಿತು ಹೀಗೆ ಹಂತಹಂತವಾಗಿ ಪರಸ್ಪರಾವಲಂಬನೆ ಬೆಳೆದು ಈಗಿನ ಕಾಲದ ಆರ್ಥಿಕ ಜೀವವು ರಾಷ್ಟ್ರಗಳ ಎಲ್ಲೆಯನ್ನು ಮೀರಿ ಅಂತರ್ರಾಷ್ಟ್ರೀಯ ವೈಶಾಲ್ಯವನ್ನು ಪಡೆದಿದೆ

ಅಂತರ್ರಾಷ್ಟ್ರೀಯ ಆರ್ಥಿಕ ವ್ಯವಹಾರವು ವಿಶೇಷವಾಗಿ ಅಭಿವೃದ್ಧಿಗೆ ಬಂದುದು ಈಗ್ಗೆ ಸುಮಾರು ಇನ್ನೂರು ವರ್ಷಗಳಿಂದೀಚೆಗೆ ಅದಕ್ಕೆ ಮುಂಚೆ ಎಲ್ಲಾ ದೇಶಗಳಲ್ಲೂ ಆರ್ಥಿಕ ಜೀವನವು ಆಯಾ ರಾಷ್ಟ್ರಗಳ ಆವರಣದಲ್ಲೇ ಅಲ್ಲಿನ ಸ್ಥಿತಿಗತಿಗಳಿಗನುಕೂಲವಾಗಿ ಏರ್ಪಟ್ಟು ಒಳಪೇರಿದ ರಚನಾವಿಧಿಗನುಸಾರವಾಗಿ ಸಾಗುತ್ತಿತ್ತು. ಸಂಸಾರವನ್ನು ನಡೆಯಿಸುವುದೇ ಜನರ ಮುಖ್ಯ ಧ್ಯೇಯವಾಗಿತ್ತು ಅದಕ್ಕೆ ಅನುಗುಣವಾದ ಮುಖ್ಯ ಕಸಬು ವ್ಯವಸಾಯ ಅಲ್ಲಲ್ಲಿ ಕಂಡುಬರುತ್ತಿದ್ದ ಕೈಗಾರಿಕೆಗಳೆಲ್ಲವೂ ಕೆಲಸಗಾರರ ಮನೆಗಳಲ್ಲೇ ಕೈಕೆಲಸಗಳಾಗಿ ನಡೆಯು

ತ್ತಿದ್ದುವು ಮತ್ತು ಅವಕ್ಕೆ ಬೇಕಾದ ಸಲಕರಣೆಗಳೆಲ್ಲವನ್ನೂ ಹೆಚ್ಚು ಶ್ರಮವಿಲ್ಲದೆ ಅವರೇ ಸಜ್ಜುಗೊಳಿಸಿಕೊಳ್ಳುತ್ತಿದ್ದರು ಮುಖ್ಯ ಕೈಗಾರಿಕೆಗಳೆಂದರೆ ನೂಲುವುದು ಮತ್ತು ನೇಯುವುದು ಇವೂ ಕೂಡ ವ್ಯವಸಾಯದ ಜೊತೆಗೆ ಉಪಕಸಬುಗಳಾಗಿದ್ದುವು ಅಲ್ಲಲ್ಲಿ ಬಂಡವಾಳಗಾರರು ಕೈಗಾರಿಕೆಗಳನ್ನೇ ತಮ್ಮ ಮುಖ್ಯ ಕಸಬನ್ನಾಗಿ ಪರಿಗಣಿಸಿ ಹತ್ತಾರು ಕೆಲಸಗಾರರನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳುವ ಪದ್ಧತಿ ಕೆಲವೆಡೆಗಳಲ್ಲಿ ಕಂಡುಬಂದರೂ ಕೈಗಾರಿಕೆಯ ಕೆಲಸವು ವಿಶೇಷವಾಗಿ ಕೆಲಸಗಾರರ ಮನೆಯಲ್ಲೇ ಸ್ವತಂತ್ರವಾಗಿ ಸಾಗುತ್ತಿತ್ತು ಈ ಆರ್ಥಿಕ ಜೀವನದಲ್ಲಿ ಸಮೃದ್ಧಿ ಇತ್ತು. ಆತಂಕವಿಲ್ಲದ ಮತ್ತು ಸ್ವತಂತ್ರವಾದ ಗ್ರಾಮಜೀವನದ ಸೌಖ್ಯವನ್ನು ಎಲ್ಲರೂ ಸವಿಯುತ್ತಿದ್ದರು ಜೀವನಕ್ಕೆ ಬೇಕಾದ ವಸ್ತುಗಳನ್ನು ಹವಣಿಸಿಕೊಂಡು ಸರಳಜೀವನದ ಆನಂದವನ್ನು ಆಗಿನ ಜನರು ಹೊಂದಿದ್ದರೆನ್ನಬಹುದು

ವ್ಯಾಪಾರ ಈಗಿನಷ್ಟು ಹರಡಿರಲಿಲ್ಲ ದೇಶದ ಒಳಗೇ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಪದಾರ್ಥಗಳನ್ನು ಹೆಚ್ಚಾಗಿ ಬೆಳೆದ ಅಥವಾ ತಯಾರು ಮಾಡಿದ ಕಡೆಯಿಂದ ಅವು ಅಭಾವವಾದ ಅಥವಾ ಕಡಮೆಯಾಗಿರುವ ಕಡೆಗಳಿಗೆ ಸಾಗಿಸಿ ಹೆಚ್ಚುಕಡಮೆಯ ಪರಿಸ್ಥಿತಿಯನ್ನು ಸರಿತೂಗಿಸಲು ಸಾಕಾದಷ್ಟು ಮಾತ್ರ ವ್ಯಾಪಾರವು ಇತ್ತೆಂದು ಹೇಳಬಹುದು ದೇಶದಲ್ಲಿ ಬೆಳೆಯಲು ಅಥವಾ ತಯಾರಿಸಲು ಸಾಧ್ಯವಿಲ್ಲದ ಅತ್ಯಾವಶ್ಯಕವಾದ ವಸ್ತುಗಳನ್ನು ಮಾತ್ರ ಪರದೇಶಗಳಿಂದ ತರಿಸಬೇಕಾಗಿತ್ತು ಈ ಆಮದುಗಳಿಗೆ ಪ್ರತಿಯಾಗಿ ದೇಶದ ಹೆಸರುವಾಸಿಯಾದ ವಸ್ತುಗಳು ರಫ್ತಾಗುತ್ತಿದ್ದುವು ವಾಹನಗಳ ಓಡಾಟ ಬಹಳ ಕಡಮೆಯಾಗಿತ್ತು ಅತಿ ವೇಗವಾಗಿ ಚಲಿಸುವ

ಕುದುರೆಗಾಡಿಗಳು ಕೂಡ ಗಂಟೆಗೆ ಹತ್ತುಮೈಲಿಗಳಿಗಿಂತ ಜೋರಾಗಿ ಓಡುತ್ತಿರಲಿಲ್ಲ ರಸ್ತೆಗಳು ಬಹು ಕೆಡಾಗಿದ್ದುದರಿಂದ ಪ್ರಯಾಣ ಬಹು ದುಸ್ತರವಾಗಿತ್ತು ಸಮುದ್ರದ ಮೇಲೆ ಹಡಗುಗಳು ಗಾಳಿಯ ಸಹಾಯದಿಂದ ಸಂಚರಿಸುತ್ತಿದ್ದುವು ಜನಗಳ ಓಡಾಟವಲ್ಲ ಐವತ್ತು ಅರುವತ್ತು ಮೈಲಿಗಳ ಆವರಣ ದಲ್ಲಿ ಮುಕ್ತಾಯಗೊಳ್ಳುತ್ತಿತ್ತು, ಅದಕ್ಕಿಂತ ದೂರ ಪ್ರಯಾಣವು ಬಹಳ ಅಪರೂಪವಾಗಿತ್ತು, ದೇಶದ ಬೇರೆಬೇರೆ ಭಾಗಗಳ ಜನರು ಸಂಧಿಸುವುದು ಬಹಳ ಕಡಮೆಯಾಗಿತ್ತು

ಹದಿನೆಂಟನೆಯ ಶತಮಾನದ ಉತ್ತರಾರ್ಧದಿಂದೀಚೆಗೆ ಹಲವು ದೇಶಗಳ ಆರ್ಥಿಕಜೀವನವು ಕ್ರಾಂತಿರೀತಿಯಲ್ಲಿ ಪರಿ ವರ್ತನೆಯಾಗಿವ ಈ ಬದಲಾವಣೆ ಆರಂಭವಾದುದು ಇಂಗ್ಲೆಂಡು ದೇಶದಲ್ಲಿ ಅಲ್ಲಿಂದ ಇತರ ದೇಶಗಳಿಗೂ ಬಹು ವೇಗವಾಗಿ ಹಬ್ಬಿತು, ಇನ್ನೂ ಹಬ್ಬುತ್ತಿದೆ ಈ ಕ್ರಾಂತಿಗೆ ಒಳಗಾದ ದೇಶಗಳಲ್ಲೆಲ್ಲಾ ಆರ್ಥಿಕ ಜೀವನವು ಗುರುತಿಸ ಲಾಗದಷ್ಟು ಬದಲಾಯಿಸಿದೆ ಅಷ್ಟೇ ಅಲ್ಲದೆ ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲೂ ಇದರ ಪ್ರಭಾವ ಪ್ರಸರಿಸಿ ಜನಜೀವನದ ರೀತಿನೀತಿಗಳು ಬಹುವಾಗಿ ರೂಪಾಂತರ ಹೊಂದುತ್ತಲಿವೆ

ಮೊದಮೊದಲು, ಬೀಸುವ ಗಾಳಿ ಮತ್ತು ಹರಿಯುವ ನೀರು—ಇವುಗಳ ಶಕ್ತಿಯಿಂದ ನಡೆಯಲು ಪ್ರಾರಂಭವಾದ ಯಂತ್ರಗಳು ಕ್ರಮಕ್ರಮವಾಗಿ ಹಬೆ, ಪೆಟ್ರೋಲ್, ವಿದ್ಯುತ್ ಇತ್ಯಾದಿ ವಿವಿಧ ಶಕ್ತಿ ಸಾಧನೆಗಳನ್ನು ಉಪಯೋಗಿಸಿಕೊಂಡು ಅತಿಶಯರೀತಿಯಲ್ಲಿ ಮುಂದುವರಿದಿವೆ ಮನೆಗಳಲ್ಲೇ ಸುಲ ಭೋಪಕರಣಗಳ ಸಹಾಯದಿಂದ ನಡೆಯುತ್ತಿದ್ದ ಕೈಕೆಲಸ ಗಳೆಲ್ಲವೂ ದೊಡ್ಡ ದೊಡ್ಡ ಗಿರಣಿಗಳಲ್ಲಿ ದೊಡ್ಡ ದೊಡ್ಡ

ಯಂತ್ರೋಪಕರಣಗಳಿಂದ ನಡೆಯಲಾರಂಭವಾದುವು ಕಬ್ಬಿಣದ ಯಂತ್ರಗಳು ಎಲ್ಲೆಲ್ಲೂ ಬಳಕೆಗೆ ಬಂದುವು ವಿಜ್ಞಾನದ ಸಹಾಯದಿಂದ ಚಿತ್ರವಿಚಿತ್ರವಾದ ಹೊಸ ಹೊಸ ಯುಕ್ತಿಗಳೂ ಯಂತ್ರೋಪಕರಣಗಳೂ ಸೃಷ್ಟಿಯಾದುವು ಪದಾರ್ಥಗಳ ತಯಾರಿಕೆಯ ರೀತಿಯೇ ಬದಲಾಯಿಸಿತು ಯಂತ್ರಗಳ ಉಪಯೋಗದಿಂದ ದೇಹಬಲಕ್ಕೂ ಕಲಾಕೌಶಲ್ಯಗಳಿಗೂ ಇದ್ದ ಪ್ರಾಶಸ್ತ್ಯ ಕಡಮೆಯಾಯಿತು, ಗಂಡಾಳುಗಳಿಗೆ ಬದಲಾಗಿ ಹೆಣ್ಣಾಳನ್ನೂ ಮಕ್ಕಳನ್ನೂ ಕಡಮೆ ದರದ ಕೂಲಿಗೆ ನೇಮಿಸಿಕೊಂಡು ಕೆಲಸ ಜರುಗಿಸಲು ಸಾಧ್ಯವಾಯಿತು. ತಯಾರಿಕೆಯ ಕಾಲಪ್ರಮಾಣವು ಕಡಮೆಯಾದುದರಿಂದ ಸಾಮಾನುಗಳ ಉತ್ಪತ್ತಿಯನ್ನು ಮೊದಲಿಗಿಂತ ಎರಡರಷ್ಟು ಮೂರರಷ್ಟು ಹೆಚ್ಚಿಸಲು ಅನುಕೂಲವಾಯಿತು ಕಟ್ಟಡಗಳಿಗೆ, ಯಂತ್ರಗಳ ಜೋಡಣೆಗೆ, ಶಕ್ತಿಯ ಉತ್ಪತ್ತಿಗೆ, ಕೈಗಾರಿಕೆಗೆ ಬೇಕಾದ ಕಚ್ಚಾಮಾಲು ಶೇಖರಿಸುವುದಕ್ಕೆ, ನೌಕರರ ಸಂಬಳದ ಮತ್ತು ಕೆಲಸಗಾರರ ಕೂಲಿಯ ಬಟವಾಡೆಗೆ-ಇವೆಲ್ಲಕ್ಕೂ ಹೆಚ್ಚಿನ ಬಂಡವಾಳ ಬೇಕಾಯಿತು ಆದುದರಿಂದ ಬಂಡವಾಳಗಾರರ ಪ್ರಾಬಲ್ಯ ಹೆಚ್ಚಿತು ಹೆಚ್ಚು ಬಂಡವಾಳವನ್ನು ಸುಲಭವಾಗಿ ಶೇಖರಿಸಲು ಅನುಕೂಲವಾಗುವಂತೆ ನಿಯಮಿತ ಜವಾಬ್ದಾರಿಯ ಕಂಪನಿಗಳು ಹುಟ್ಟಿಕೊಂಡುವು ಬೇರೆ ಕಡೆಗಳಿಂದ ಕಚ್ಚಾಸಾಮಾನುಗಳನ್ನು ಕಾರ್ಖಾನೆಗೆ ಧಾರಾಳವಾಗಿ ಒದಗಿಸುವುದಕ್ಕೂ ಏಕಪ್ರಕಾರವಾಗಿ ತಯಾರಾದ ಸಾಮಾನುಗಳನ್ನು ಬೇರೆ ಸ್ಥಳಗಳಿಗೆ ಬಿಕರಿಗಾಗಿ ಸಾಗಿಸುವುದಕ್ಕೂ ರೈಲ್ವೆಗಳು, ಹಡಗುಗಳು ಮತ್ತು ಇತರ ಯಾನವಾಹನಗಳು ಉತ್ತಮಗೊಂಡುವು ದೇಶದ ಒಳಗೂ ಹೊರಗೂ ವ್ಯಾಪಾರವು ಸುಲಭವಾಗಿ ಸಾಗಲು ಅನೇಕ ಅನುಕೂಲಗಳೇರ್ಪಟ್ಟುವು ಹಲವು ದೇಶಗಳಲ್ಲಿ

ಸರ್ಕಾರದ ತಾಟಸ್ಥ್ಯದ ಪರಿಣಾಮವಾಗಿ ಬಂಡವಾಳಗಾರರು ಕೈಗಾರಿಕೆಗಳನ್ನು ನಡಸುವ ಸ್ವಾತಂತ್ರ್ಯವನ್ನು ಪಡೆದು ಬಹಳ ಹುರುಪಿನಿಂದಲೂ ಸ್ವಾರ್ಥದಿಂದಲೂ ಕೆಲಸ ನಡೆಸಿ, ಅಗಾಧ ವಾಗಿ ಅರ್ಥಾರ್ಜನೆಮಾಡಲು ಅವಕಾಶವುಂಟಾಯಿತು

ಈ ವಿಧವಾಗಿ ಕೈಗಾರಿಕೆಗಳು ಬೆಳೆದುದರ ಪರಿಣಾಮವಾಗಿ ಪ್ರಪಂಚದ ಬೇರೆ ಬೇರೆ ಭಾಗದ ಜನರು ಪರಸ್ಪರ ಆರ್ಥಿಕ ಸಂಬಂಧಗಳನ್ನು ಬೆಳಸಬೇಕಾಯಿತು ಅಂತರ್ರಾಷ್ಟ್ರೀಯ ಬಾಂಧವ್ಯ ಮೊಳೆಯಿತು ಒಂದೊಂದು ದೇಶವೂ ಒಂದೊಂದು ಬಗೆಯಾದ ಕೆಲಸಗಳನ್ನು ಹಂಚಿಕೊಂಡು ಪರಸ್ಪರ ಸೌಹಾರ್ದ ದಿಂದ ವ್ಯವಹರಿಸಿ ಎಲ್ಲವೂ ಅಭಿವೃದ್ಧಿಗೆ ಬರಲು ಮಾರ್ಗವಾ ಯಿತು ಇಂಗ್ಲೆಂಡ್ ಮುಂತಾದ ದೇಶಗಳು ಇತರ ದೇಶಗಳಿಗೆ ತಮ್ಮಲ್ಲಿ ತಯಾರಾದ ಕೈಗಾರಿಕೆಯ ಸಾಮಾನುಗಳನ್ನು ಕಳು ಹಿಸಿ, ತಮಗೆ ಬೇಕಾದ ಆಹಾರ ಸಾಮಗ್ರಿಗಳನ್ನೂ ಕಚ್ಚಾ ಸಾಮಾನುಗಳನ್ನೂ ಪ್ರಪಂಚದ ನಾನಾ ಭಾಗಗಳಿಂದ ತರಿಸಿ ಕೊಳ್ಳಬೇಕಾಗಿರುವ ಈಗಿನ ಪರಿಸ್ಥಿತಿ ಕೈಗಾರಿಕೆಯ ಕ್ರಾಂತಿಯ ಪರಿಣಾಮವಾಗಿದೆ. ಇಂಗ್ಲೆಂಡಿನ ಪಟ್ಟಣಗಳಲ್ಲಿ ನಿತ್ಯಜೀವನಕ್ಕೆ ಬೇಕಾದ ಹಾಲು, ಬೆಣ್ಣೆ, ಕೋಳಿಯಮೊಟ್ಟೆ, ಮಾಂಸ, ಹಣ್ಣು ಹಂಪಲುಗಳು, ಕಾಯಿಪಲ್ಯಗಳು, ಮುಂತಾದುವೆಲ್ಲವೂ ಪರ ದೇಶದಿಂದ ಒದಗುವುವು ಇವಕ್ಕೆ ಬದಲಾಗಿ ಕಬ್ಬಿಣದ ಸಾಮಾನುಗಳು, ಹತ್ತಿ ಮತ್ತು ಉಣ್ಣೆಬಟ್ಟೆ ಮುಂತಾದ ಕೈ ಗಾರಿಕೆಯ ಸಾಮಾನುಗಳು ಪರದೇಶಗಳಿಗೆ ರಫ್ತಾಗುವುವು ಇದೆಲ್ಲವೂ ನಮಗೆ ಬಹಳ ತೊಡಕಾದ ಪ್ರಮೇಯವಾಗಿ ಕಂಡರೂ ಅವನ್ನು ಪಾಶ್ಚಾತ್ಯ ದೇಶದವರು ಬಹಳ ಸಲೀಸಾಗಿ ನಡೆಸಿಕೊಂಡು ಹೋಗುತ್ತಿರುವರು ಇವಕ್ಕೆ ಇವರ ಯಾನ ವಾಹನಗಳ ಮತ್ತು ವಹಿವಾಟುಗಳ (Communication)

ಸುಪ್ತನನ್ನು, ವಿಚಕ್ಷಣೆಯಿಂದ ಕೂಡಿದ ರಚನಾವಿಧಾನಗಳು ಸ್ವಹಿತವನ್ನು ಸಾಧಿಸಬೇಕೆಂಬ ಪ್ರಬಲವಾದ ಆಕಾಂಕ್ಷೆ-ಇವು ಮುಖ್ಯವಾದ ಕಾರಣಗಳು ಪ್ರಪಂಚದ ನಾನಾ ಭಾಗಗಳು ಸಹಕರಿಸಿ ಒಂದು ವ್ಯವಸ್ಥೆಗೆ ಕಟ್ಟುಬಿದ್ದು ಕಲಸ ಮಾಡುವ ಏರ್ಪಾಡುಗಳು ವಿಸ್ಮಯಗೊಳಿಸುವಷ್ಟು ವಿತರಣೆಯಿಂದ ಬೆಳೆಯುತ್ತಿವೆ ನಾವು ಮನೆಯಲ್ಲಿ ಕೂತಿರುವಲ್ಲೇ ಸಾವಿರಾರು ಮೈಲಿಗಳಾಚೆ ನಡೆಯುವ ಸಂಗೀತ, ಭಾಷಣಗಳು, ರಾಜಕೀಯ ಮತ್ತು ವಾಣಿಜ್ಯ ವಿವರಗಳು- ಇವನ್ನೆಲ್ಲಾ ಆಕಾಶವಾಣಿಯ (ರೇಡಿಯೋ) ಮೂಲಕ ಕೇಳಬಹುದು ಅಲ್ಲದೆ ಅಲ್ಲಿ ನಡೆಯುವ ದೃಶ್ಯಗಳನ್ನು ಕೂಡ ಇಲ್ಲಿಂದಲೇ ನೋಡಲಾಗುವಂಥ ಅನುಕೂಲಗಳೇರ್ಪಟ್ಟಿವೆ ದೇಶಾಂತರದಲ್ಲಿರುವವರೊಂದಿಗೆ ಟೆಲಿಫೋನ್ ಮೂಲಕ ಸಂಭಾಷಣೆ ನಡೆಸಲು ಸಾಧ್ಯವಾಗಿದೆ ದೂರವೆಂಬುದು ಸರಿಸಿಹೋಗುತ್ತಿದೆ ಕುದುರೆಯ ಗಾಡಿಯಲ್ಲಿ ಗಂಟೆಗೆ ಹತ್ತು ಮೈಲಿಯಂತೆ ಪ್ರಯಾಣಮಾಡುವ ಕಾಲ ಹೋಯಿತು, ಹಬೆ, ಪೆಟ್ರೋಲ್, ವಿದ್ಯುಚ್ಛಕ್ತಿ—ಇವುಗಳ ಸಹಾಯದಿಂದ, ರೈಲಿನಲ್ಲಿ, ಮೋಟಾರಿನಲ್ಲಿ ಮತ್ತು ವಿಮಾನಗಳಲ್ಲಿ ಗಂಟೆಗೆ ಐವತ್ತರಿಂದ ಹಿಡಿದು ಇನ್ನೂರು ಮೈಲಿಗಳ ವೇಗದಲ್ಲಿ ಪ್ರಯಾಣಮಾಡಲು ಸಾಧ್ಯವಾಗಿದೆ

ಈ ರೀತಿಯಾದ ಬದಲಾವಣೆಗಳ ಪರಿಣಾಮವಾಗಿ ವಿವಿಧ ದೇಶಗಳ ಜನರ ಆರ್ಥಿಕ ಜೀವನವು ಅಂತರ್ರಾಷ್ಟ್ರೀಯ ಆವರಣದಲ್ಲಿ ಜರುಗುತ್ತಿದೆ ನಮ್ಮ ದೇಶದ ಬೆಳೆಗಳು ಪ್ರಪಂಚದ ನಾನಾ ಭಾಗಗಳಿಗೆ ಸಾಗುತ್ತಿವೆ ಪರದೇಶದ ಕೈಗಾರಿಕೆಯ ಸಾಮಾನುಗಳು ನಮ್ಮ ದೇಶದ ಹಳ್ಳಿಗಳಲ್ಲೂ ಹರಡಿ ಸ್ಥಳೀಯ ಕೈಕಸಬುಗಳನ್ನು ಮೂಲೆಗೊತ್ತುತ್ತಿವೆ ಅಂತರ್ರಾಷ್ಟ್ರೀಯ ಆರ್ಥಿಕ ಐಕಮತ್ಯವು ಹೆಚ್ಚುತ್ತಿದೆ ಒಂದು ಪ್ರದೇಶದ

ಆರ್ಥಿಕ ಸಂಘಟನೆಯಿಂದಾದ ಪರಿಣಾಮವು ಪ್ರಪಂಚದ ಇತರ ದೇಶಗಳನ್ನೆಲ್ಲಾ ಆವರಿಸುವುದು ಅಮೇರಿಕಾದ ಸಂಯುಕ್ತ ಸಂಸ್ಥಾನಗಳ ಹತ್ತಿಯ ಬೆಲೆ ಏರಿದರೆ ಅಥವಾ ಇಳಿದರೆ ಅದರ ಪ್ರಭಾವ ಪ್ರಪಂಚದ ಹತ್ತಿಯ ಪೇಟೆಗಳಲ್ಲೆಲ್ಲಾ ಪ್ರತಿಬಿಂಬಿಸುತ್ತದೆ ಅಲ್ಲಿನ ಉಬ್ಬರವಿಳಿತಗಳಿಂದಾದ ಕಷ್ಟನಷ್ಟಗಳು ಮೈಸೂರು ದೇಶದಲ್ಲಿ ಹತ್ತಿ ಬೆಳೆಯುವ ರೈತನಿಗೂ ತಟ್ಟುವುವು ಮೈಸೂರಿನ ಕಾಫಿಯ ಧಾರಣೆ ಬ್ರೆಜಿಲ್ ದೇಶದ ಕಾಫಿಬೆಳೆಯ ಧಾರಣೆಯನ್ನನುಸರಿಸಿರುವುದು ಅಥವಾ ಇಳಿಯುವುದು ಭಾರತೀಯರ ಕೊಳ್ಳುವ ಶಕ್ತಿಯನ್ನು (Purchasing Power) ಉತ್ತಮ ಪಡಿಸುವುದರ ಮೂಲಕ ಇಂಗ್ಲಂಡಿನ ಹತ್ತಿ ಗಿರಣಿಗಳು ತಮ್ಮ ಅಭ್ಯುದಯವನ್ನು ಸಾಧಿಸಲು ಯತ್ನಿಸಿರುವುವು ನ್ಯೂಯಾರ್ಕಿನ ಪೇಟೆಯಲ್ಲಿ ನಡೆಯುವ ಆರ್ಥಿಕ ವ್ಯವಹಾರಗಳು ಬೊಂಬಾಯಿನ ಪೇಟೆಯ ಧಾರಣೆಪಾಸಿಗಳನ್ನು ನಿರ್ಧರಿಸಿರುವುವು ಈ ರೀತಿ ಪ್ರಪಂಚದ ಆರ್ಥಿಕ ವ್ಯವಹಾರಗಳೆಲ್ಲವೂ ಪರಸ್ಪರ ಸಂಬಂಧಗಳಲ್ಲಿ ಹೆಣೆದುಕೊಂಡಿವೆ

ವಿಜ್ಞಾನವು ವಿಶೇಷವಾಗಿ ಮುಂದುವರಿದಿರುವುದರಿಂದ ಇಂದಿನ ಜೀವನದಲ್ಲಿ ಕ್ರಾಂತಿ ಹುಟ್ಟಿ ಆರ್ಥಿಕಸ್ಥಿತಿ ತಲೆಕೆಳಗಾಗುತ್ತಿದೆ ಇಂಥಾ ಕಾಲದಲ್ಲಿ ನಮ್ಮ ಭಾರತೀಯರ ಸ್ಥಿತಿ ಏನು ? ಇತರ ದೇಶಗಳೊಂದಿಗೆ ಹೋಲಿಸಿ ನೋಡಿದರೆ ನಮ್ಮ ಸ್ಥಾನವೇನು ? ನಮ್ಮ ಮುಂದಿನ ಗತಿಯೇನು ?—ಇವೇ ಮೊದಲಾದ ಪ್ರಶ್ನೆಗಳು ಎಲ್ಲರ ಮನಸ್ಸಿನಲ್ಲಿಯೂ ಮೂಡುವುದು ಸಹಜ ನಮ್ಮ ಸ್ಥಿತಿಯನ್ನು ಅಂತರ್ರಾಷ್ಟ್ರೀಯ ದೃಷ್ಟಿಯಿಂದ ವಿಚಾರಮಾಡಬೇಕು ಅಂತರ್ರಾಷ್ಟ್ರೀಯ ಹೋರಾಟಗಳಿಗೆಲ್ಲಾ ಆರ್ಥಿಕ ಕಾರಣಗಳೇ ಮೂಲ ಮುಂದುವರಿದಿರುವ ಜನಾಂಗಗಳೆಲ್ಲವೂ ತಮ್ಮ ಆರ್ಥಿಕ ಶಕ್ತಿಯನ್ನು ಬಲಪಡಿಸಿ

ಕೊಂಡಿರುವುದು ಬಹುಮಟ್ಟಿಗೆ ಇತರ ಆಧೀನ ಜನಾಂಗಗಳನ್ನು ಆರ್ಥಿಕ ಶೋಷಣೆಗೆ ಒಳಗುಮಾಡಿದುದರಿಂದ ಆರ್ಥಿಕ ಮೇಲ್ಮೆಗಾಗಿ ಪರದೇಶಗಳ ಆಕ್ರಮಣವೂ ನಡೆಯುತ್ತಿದೆ ನಮ್ಮ ಕಣ್ಣೆದುರಿಗೆ ಇಟಲಿ, ಜಪಾನ್ ಮತ್ತು ಜರ್ಮನಿ ದೇಶಗಳು ತಮ್ಮ ಸುತ್ತುಮುತ್ತಲಿನ ಬಲಹೀನ ರಾಷ್ಟ್ರಗಳ ಮೇಲೆ ಬಿದ್ದು ಅವುಗಳನ್ನು ವಶಪಡಿಸಿಕೊಳ್ಳುತ್ತಿಲ್ಲವೆ ? ಇಂಗ್ಲೆಂಡಿನ ಆರ್ಥಿಕ ಜೀವನಿಗೆ ಭರತಖಂಡವು ಯಾವರೀತಿಯಲ್ಲಿ ಎಷ್ಟರಮಟ್ಟಿಗೆ ಕಾರಣವಾಗಿದೆಯೆಂಬುದು ಎಲ್ಲರಿಗೂ ತಿಳಿದಿರತಕ್ಕ ವಿಷಯ. ನಮ್ಮ ದಾಸ್ಯಕ್ಕೆ ನಮ್ಮ ಆರ್ಥಿಕ ಬಲಹೀನತೆಯೂ ಒಂದು ಮುಖ್ಯಕಾರಣ ಇದು ಉತ್ತಮವಾದಲ್ಲದೆ ನಮ್ಮ ದಾಸ್ಯ ನೀಗುವುದು ಕಷ್ಟಸಾಧ್ಯ ಸ್ವಸಾಮರ್ಥ್ಯದಿಂದ ನಮ್ಮ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಂಡಲ್ಲದೆ ನಮಗೆ ಉಳಿಗಾಲವಿಲ್ಲ. ನಮ್ಮ ಸ್ವತ್ತನ್ನು ಸಂರಕ್ಷಿಸಿಕೊಳ್ಳುವ ಮಟ್ಟಿಗಾದರೂ ನಾವು ಶಕ್ತಿಯನ್ನು ಪಡೆಯಬೇಕು ಇಲ್ಲದಿದ್ದಲ್ಲಿ ಇತರರು ಸೂರೆಗೊಳ್ಳುವುದನ್ನು ತಡೆದು ನಿಲ್ಲಿಸಲು ಕೈಲಾಗದೆ ಸುಮ್ಮನೆ ನೋಡುತ್ತ ಕುಳಿತಿರಬೇಕಾಗುವುದು ಇತರರ ದಾಂದಲೆಯನ್ನು ತಡೆಯುವ ಮಟ್ಟಿಗಾದರೂ ನಮಗೆ ಚೈತನ್ಯ ಹುಟ್ಟಿಸುವಷ್ಟು ಆರ್ಥಿಕ ಸಂಪತ್ತು ನಮ್ಮ ದೇಶದ ಪ್ರಜಾಸಾಮಾನ್ಯಕ್ಕೆ ದೊರಕುವಂತಾಗಬೇಕು ಪ್ರಕೃತದಲ್ಲಿ ನಮ್ಮ ಆರ್ಥಿಕ ಸಂಪತ್ತು ಎಷ್ಟಿರುವುದು, ಇತರ ದೇಶಗಳೊಡನೆ ಹೋಲಿಸಿ ನೋಡಿದರೆ ನಮಗ ಯಾವ ಸ್ಥಾನ ದೊರಕುವುದು ಎಂಬುದನ್ನು ತಿಳಿದುಕೊಂಡರೆ ಮುಂದಿನ ಕಾರ್ಯಸಾಧನೆಗೆ ಸಹಾಯವಾಗುತ್ತದ ಊಹಾಪೋಹಗಳನ್ನು ವರ್ಜಿಸಿ ವಿಷಯಾಧಾರದಮೇಲೆ ವಿಚಾರವಾಡುವುದೇ ಆರ್ಥಿಕ ಪ್ರಗತಿಗೆ ಶಾಶ್ವತತಳಹದಿ


## ೨. ನಮ್ಮ ದೇಶದ ಪರಿಸ್ಥಿತಿ

ಭಾರತೀಯರ ಪರಿಸ್ಥಿತಿಯನ್ನು ಇತರ ಜನಾಂಗಗಳೊಡನೆ ಹೋಲಿಸಿ ನೋಡಿದರೆ ಅದರ ರೀತಿಯು ಕೇವಲ ಶೋಚನೀಯವಾಗಿರುವುದು ಸಾಮಾನ್ಯವಾಗಿ ಒಂದು ದೇಶದ ಜನರ ಆರ್ಥಿಕ ಅಭಿವೃದ್ಧಿಯನ್ನು ಪರಿಶೀಲಿಸಬೇಕಾದರೆ ಆ ದೇಶದ ಸರಾಸರಿ ತಲವರಮಾನವನ್ನು ಇತರ ದೇಶದವರ ತಲೆವರಮಾನದೊಂದಿಗೆ ಹೋಲಿಸುವುದು ವಾಡಿಕೆಯಾಗಿದೆ. ಈ ಹೋಲಿಕೆಯಲ್ಲಿ ನಮ್ಮ ಸ್ಥಾನವು ಈರೀತಿಯಾಗಿದೆ

### ಪ್ರತಿವ್ಯಕ್ತಿಯ ಸರಾಸರಿ ವಾರ್ಷಿಕ ವರಮಾನ.[1]

| | | |
|---|---|---|
| ಭರತಖಂಡ | 82 | ರೂಪಾಯಿಗಳು |
| ಜಪಾನ್ | 271 | ,, |
| ಫ್ರಾನ್ಸ್ | 636 | ರೂಪಾಯಿಗಳು |
| ಇಂಗ್ಲೆಂಡು | 1,092 | ,, |
| ಕೆನಡಾ | 1,268 | ,, |
| ಅ.ಸಂ ಸಂಸ್ಥಾನಗಳು | 2,053 | ,, |

[1] Planned Economy for India by Sir M Visvesvaraya P 27. ರೂಪಾಯಿನ ಬೆಲೆ ಕಾಲದಿಂದ ಕಾಲಕ್ಕೆ ಬದಲಾವಣೆಯಾಗುವುದರಿಂದ ಇಲ್ಲಿ ಕೊಟ್ಟಿರುವ ರೂಪಾಯಿಗಳ ಬೆಲೆಯನ್ನು ಸಮಯೋಚಿತವಾಗಿ ಬದಲಾವಣೆಮಾಡಿಕೊಳ್ಳಬೇಕಾಗುವುದು. ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ನಮ್ಮ ವರಮಾನವು ಇದರಲ್ಲಿ ಮೂರನೆಯ ಎರಡುಭಾಗ ಅಂದರೆ ಸುಮಾರು ರೂ. 55 ಎಂದು ಇಟ್ಟುಕೊಳ್ಳಬಹುದು




೧. ಬೇರೆ ಬೇರೆ ದೇಶಗಳ ತಲೆವರಮಾನ

ಭಾರತೀಯರ ವರಮಾನವು ಕೇವಲ ಕಡಮೆಯಾಗಿರುವುದು ಇದರಿಂದ ವಿದಿತವಾಗುತ್ತದೆ ಭಾರತೀಯರ ವರಮಾನದ ಅಂದಾಜನ್ನು ಮೊಟ್ಟಮೊದಲು ಮಾಡಿದವರು ಸುಪ್ರಸಿದ್ಧ ದೇಶಭಕ್ತರಾದ ದಾಧಾಭಾಯಿ ನವರೋಜಿ ಅವರು 1870 ರಲ್ಲಿ ಅವರು ಭಾರತೀಯರ ವರಮಾನವು ವರ್ಷಕ್ಕೆ ಸರಾಸರಿ ತಲೆಯೊಂದಕ್ಕೆ ಇಪ್ಪತ್ತುರೂಪಾಯಿಗಳೆಂದು ಗಣನೆಮಾಡಿದರು ಅಲ್ಲಿಂದೀಚೆಗೆ ಅರ್ಥಶಾಸ್ತ್ರಪಂಡಿತರು ವರಮಾನದ ಅಂದಾಜನ್ನು ಪರಿಶೀಲಿಸಿರುವರು ಸರ್ ಎಂ ವಿಶ್ವೇಶ್ವರಯ್ಯನವರ ಅಂದಾಜಿನ ಮೇರೆ ಅದು ಎಂಬತ್ತೆರಡುರೂಪಾಯಿಗಳು ಫಿಂಡ್ಲೇ ಶಿರಾಸ್


ಎಂಬ ಅರ್ಥಶಾಸ್ತ್ರಪಂಡಿತರು ಭಾರತೀಯರ ವರಮಾನ ನೂರು ಹದಿನಾರು ರೂಪಾಯಿಗಳೆಂದು ಪ್ರಕಟಿಸಿರುವರು. ಬೊಂಬಾಯಿನ ಷಹಾ ಮತ್ತು ಖಾಂಬೆಟ್ಟಾ ಎಂಬ ಇನ್ನಿಬ್ಬರು ಪಂಡಿತರ ಗಣನೆಯ ಪ್ರಕಾರ ನಮ್ಮ ವರಮಾನವು ಎಪ್ಪತ್ತುನಾಲ್ಕು ರೂಪಾಯಿಗಳು ಮಾತ್ರ. ಡಾ|| ರಾವ್ ಎಂಬವರು ಅದು ಅರುವತ್ತೆರಡು ರೂಪಾಯಿಗಳೆಂದು ಈಚೆಗೆ ಲೆಕ್ಕಹಾಕಿರುವರು. ಈ ಗಣನೆಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು ಕಂಡುಬಂದರೂ ಮುಖ್ಯವಾಗಿ ಭಾರತೀಯರದು ಎಲ್ಲರಿಗಿಂತಲೂ ಕೀಳು ವರಮಾನವೆಂಬುದರಲ್ಲಿ ಏಕಾಭಿಪ್ರಾಯವಿರುವುದು. ನಮ್ಮ ವರಮಾನವು ಅಮೆರಿಕಾದ ಸಂಯುಕ್ತಸಂಸ್ಥಾನಗಳ ವರಮಾನದ ಇಪ್ಪತ್ತೈದನೆಯ ಒಂದು ಭಾಗದಷ್ಟು, ಇಂಗ್ಲೆಂಡಿನ ವರಮಾನದ ಹದಿಮೂರನೆಯ ಒಂದು ಭಾಗದಷ್ಟು, ಜಪಾನಿನ ವರಮಾನದ ಮೂರನೆಯ ಒಂದು ಭಾಗದಷ್ಟು ಇರುವುದು.

ನಮ್ಮ ವರಮಾನ ಇಷ್ಟು ಹೀನವಾಗಿರುವುದಕ್ಕೆ ನಮ್ಮವರು ವಿಶೇಷವಾಗಿ ವ್ಯವಸಾಯದಿಂದಲೇ ಜೀವನಮಾಡುತ್ತಿರುವುದು ಮುಖ್ಯ ಕಾರಣವೆನ್ನಬಹುದು. ನಮ್ಮದು ಹಳ್ಳಿಗಳ ದೇಶ. ಭರತಖಂಡದಲ್ಲಿ ಏಳುಲಕ್ಷಕ್ಕೆ ಮೇಲ್ಪಟ್ಟು ಹಳ್ಳಿಗಳಿವೆ, ಹಳ್ಳಿಗಳಲ್ಲೇ ಜನರು ಹೆಚ್ಚಾಗಿ ವಾಸಿಸುವುದು. ವ್ಯವಸಾಯವೇ ಜೀವನಾಧಾರವಾಗಿರತಕ್ಕ ದೇಶಗಳಲ್ಲಿ ಹೆಚ್ಚು ಜನರು ಪಟ್ಟಣವಾಸಿಗಳಾದರೆ ಅದು ಕೈಗಾರಿಕೆಯ ಅಭಿವೃದ್ಧಿಯನ್ನು ಸೂಚಿಸುವುದು. ಈ ಕೆಳಗೆ ಕೊಟ್ಟಿರುವ ವಿವರಣೆಯಿಂದ[2] ಬೇರೆ ಬೇರೆ ದೇಶಗಳ ವಿಸ್ತೀರ್ಣ ಮತ್ತು ಒಟ್ಟು ಪ್ರಜಾಸಂಖ್ಯೆಯಲ್ಲಿ

---

[2] ಅದೇ ಪುಸ್ತಕ, ಪುಟ 15

ಗ್ರಾಮಾಂತರ ಮತ್ತು ಪಟ್ಟಣವಾಸದ ಹಂಚಿಕೆ ಯಾವ ರೀತಿ ಇದೆ ಎಂಬುದು ವ್ಯಕ್ತವಾಗುವುದು.




೨. ಬೇರೆ ಬೇರೆ ದೇಶಗಳಲ್ಲಿರುವ ಹಳ್ಳಿಗಳ ಮತ್ತು ಪಟ್ಟಣಗಳ ಪ್ರಜಾಸಂಖ್ಯೆಯ ಪ್ರಮಾಣ.

| ದೇಶಗಳು | ವಿಸ್ತೀರ್ಣ ಲಕ್ಷ ಚದರ ಮೈಲಿಗಳು | ಒಟ್ಟು ಪ್ರಜಾಸಂಖ್ಯೆ (ಕೋಟಿ) | ಹಳ್ಳಿಯ ನಿವಾಸಿಗಳು (ಶೇಕಡ) | ಪಟ್ಟಣಗಳಲ್ಲಿ ವಾಸಮಾಡುವವರು (ಶೇಕಡ) |
|---|---|---|---|---|
| ಭರತಖಂಡ | 18 09 | 35·[illegible] | 89 | 11 |
| ಅ. ಸಂ. ಸಂ. | 35 55 | 2 2 | 44 | 56 |
| ಜಪಾನ್ | 1 47 | 6 4 | 44 | 56 |
| ಇಂಗ್ಲೆಂಡು | 0·89 | 4 5 | 20 | 80 |
| ಫ್ರಾನ್ಸ್ | 2 12 | 4 [illegible] | 50 | 50 |
| ಕೆನಡಾ | 35·10 | [illegible]·0 | 46 | 54 |

ಹಳ್ಳಿಗಳಲ್ಲಿ ವಾಸಮಾಡಿಕೊಂಡು ವ್ಯವಸಾಯದಿಂದಲೇ ಜೀವಿಸುವವರ ಸಂಖ್ಯೆ ನಮ್ಮ ದೇಶದಲ್ಲಿ ಅತ್ಯಧಿಕವಾಗಿರುವುದು ಇದು ಈ ಕೆಳಗ ಕೊಟ್ಟಿರುವ[3] ವಿವಿಧ ಕಸಬುಗಳ ಹಂಚಿಕೆ ತಾರತಮ್ಯ ಪಟ್ಟಿಯಿಂದಲೂ ವಿದಿತವಾಗುವುದು


## ಕಸಬುಗಳ ಹಂಚಿಕೆ

(ಒಟ್ಟು ಪ್ರಜಾಸಂಖ್ಯೆಯ ಶೇಕಡ)

| ದೇಶಗಳು | ವ್ಯವಸಾಯ | ಕೈಗಾರಿಕೆ | ವ್ಯಾಪಾರ ಮತ್ತು ಯಾನವಾಹನ | ಇತರ |
|---|---|---|---|---|
| ಭರತಖಂಡ | 67 [illegible] | 10·2 | 6 8 | 16.0 |
| ಅ. ಸಂ ಸಂ | 22 0 | 3 7 | 24·5 | 21 8 |
| ಜಪಾನ್ | 50 3 | 19·5 | 20·2 | 10 0 |
| ಇಂಗ್ಲೆಂಡು | 7 1 | 47 2 | 20·7 | 25·0 |
| ಫ್ರಾನ್ಸ್ | 38·3 | 33 3 | 17 0 | 1[illegible] 4 |
| ಕೆನಡಾ | 3 2 | 24 9 | 17·7 | 26·2 |

---

[3] ಅದೇ ಪುಸ್ತಕ, ಪುಟ 399.




೩. ಕಸಬುಗಳ ಪಂಚಿಕೆ.

ವ್ಯವಸಾಯದಿಂದಲೇ ಜೀವಿಸುತ್ತಿರುವ ನಮ್ಮ ದೇಶದ ಜನ ಂಖ್ಯೆಯ ವಿಷಯದಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಶೇಷ ಸಂಗತಿಯುಂಟು ಪ್ರಗತಿಹೊಂದಿರುವ ಎಲ್ಲಾ ದೇಶ ಳಲ್ಲೂ ವ್ಯವಸಾಯದಿಂದ ಜೀವನಮಾಡತಕ್ಕವರ ಸಂಖ್ಯೆ


ಕ್ರಮೇಣ ಕಡಮೆಯಾಗುತ್ತಾ ಕೈಗಾರಿಕೆ ವ್ಯಾಪಾರ ಮುಂತಾದ ಹೆಚ್ಚು ಆದಾಯಕರವಾದ ಕಸಬುಗಳಲ್ಲಿ ಜನರು ಹೆಚ್ಚು ಹೆಚ್ಚಾಗಿ ಉದ್ಯುಕ್ತರಾಗಿರುವರು ಆದರೆ ನಮ್ಮ ದೇಶದಲ್ಲಿ ಹೆಚ್ಚು ಜನರು ಕೃಷಿಯನ್ನೇ ಹೆಚ್ಚುಹೆಚ್ಚಾಗಿ ಮರೆಹೊಕ್ಕು ಹಿಂದೆ ಬೀಳುತ್ತಿರುವುದು ತೀರ ಶೋಚನೀಯವಾದ ಸಂಗತಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಈಗ್ಗೆ ಒಂದು ಶತಮಾನದ ಹಿಂದೆ ಒಟ್ಟು ಪ್ರಜಾ ಸಂಖ್ಯೆಯಲ್ಲಿ ಶೇಕಡ 75 ರಷ್ಟು ಜನರು ಕೃಷಿಯಿಂದ ಜೀವಿಸುತ್ತಿದ್ದರು ಈಗ ಶೇಕಡ 22 ರಷ್ಟು ಮಾತ್ರ ವ್ಯವಸಾಯದಿಂದ ಜೀವಿಸುತ್ತಿರುವರು ನಮ್ಮ ದೇಶದಲ್ಲಾದರೋ ವ್ಯವಸಾಯದಿಂದ ಜೀವನ ಮಾಡುವವರ ಸಂಖ್ಯೆ ಹೆಚ್ಚುತ್ತಿವೆ[4])

| | | | | |
|---|---|---|---|---|
| 1891 ರಲ್ಲಿ ಜೀವನ ಮಾಡುತ್ತಿದ್ದವರ ಸಂಖ್ಯೆ | | | ಶೇ | 59 8 |
| 1911 ,, | ,, | ,, | | 71 3 |
| 1931 ,, | ,, | ,, | | 73.0 |

ಅಂದರೆ, ಈಗಿನ ಸ್ಥಿತಿಯಲ್ಲಿ ಪ್ರತಿ ನಾಲ್ಕು ಜನರಲ್ಲಿ ಮೂರು ಮಂದಿ ವ್ಯವಸಾಯದಿಂದ ಜೀವಿಸುತ್ತಿರುವರು ಮುಂದಿನ ಪ್ರಜಾಗಣನೆಯಲ್ಲಿ ಇದು ಇನ್ನೂ ಅಧಿಕವಾಗುವ ಸಂಭವವಿದೆ. ವ್ಯವಸಾಯದಿಂದ ಜೀವಿಸುವವರ ಸಂಖ್ಯೆ ಏರಿದ ಹಾಗೆಲ್ಲಾ ಜಮೀನಿನಮೇಲೆ ಒತ್ತಡವು ಜಾಸ್ತಿಯಾಗಿ ತಲೆವರಮಾನವು ಕಡಮೆಯಾಗುತ್ತಾ ಹೋಗುವುದು ಅದೂ ಅಲ್ಲದೆ, ವ್ಯವಸಾಯವು ಇತರ ಎಲ್ಲಾ ವೃತ್ತಿಗಳಿಗಿಂತಲೂ ಕನಿಷ್ಠ ವರಮಾನ ದೊರಕಿಸತಕ್ಕದ್ದೆಂಬುದು ಅನುಭವವೇದ್ಯವಾದ ವಿಷಯ ಈ

---

[4] ಅದೇ ಪುಸ್ತಕ, ಪುಟ 33.





'. ಭರತಖಂಡದಲ್ಲಿ ವ್ಯವಸಾಯಗಾರರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರುತ್ತಿರುವುದು.

ಕಾರಣದಿಂದಲೇ ಎಲ್ಲಾ ದೇಶಗಳಲ್ಲೂ ಕೈಗಾರಿಕೆಗಳನ್ನು ಹೆಚ್ಚಿಸಿ ಅದರ ಮೂಲಕ ಹೆಚ್ಚು ವರಮಾನ ಪಡೆಯುವ ಪದ್ಧತಿ ಏರ್ಪಟ್ಟಿರುವುದು. ವ್ಯವಸಾಯ ಮತ್ತು ಕೈಗಾರಿಕೆಗಳ ವರಮಾನದ ತಾರತಮ್ಯ ವಿವಿಧ ದೇಶಗಳಲ್ಲಿ ಈ ರೀತಿ ಕಂಡುಬರುತ್ತದೆ.[5]

[5] ಅದೇ ಪುಸ್ತಕ, ಪುಟ 55.

## ವ್ಯವಸಾಯ ಮತ್ತು ಕೈಗಾರಿಕೆಗಳಿಂದ ತಲೆವರಮಾನ.


| ದೇಶಗಳು | ವ್ಯವಸಾಯ ರೂ. ಗಳು | ಕೈಗಾರಿಕೆ ರೂ ಗಳು |
|---|---|---|
| ಭರತಖಂಡ | 59 | 12 |
| ಜಪಾನ್ | 57 | 158 |
| ಇಂಗ್ಲೆಂಡು | 62 | 412 |
| ಕೆನಡಾ | 213 | 470 |
| ಅಮೆರಿಕಾದ ಸಂ. ಸಂ. | 175 | 721 |




೫ ಬೇರೆ ಬೇರೆ ದೇಶಗಳಲ್ಲಿ ವ್ಯವಸಾಯ ಮತ್ತು ಕೈಗಾರಿಕೆಗಳಿಂದ ಬರುವ ತಲೆವರಮಾನದ ಪ್ರಮಾಣ.

ವ್ಯವಸಾಯವು ನಮ್ಮ ಮುಖ್ಯ ಕಸಬಾಗಿರುವುದರಿಂದಲೂ ಕೈಗಾರಿಕೆಯಲ್ಲಿ ನಾವು ಹಿಂದ ಬಿದ್ದಿರುವುದರಿಂದಲೂ ನಮ್ಮಲ್ಲಿ ತಲೆವರಮಾನವು ಇತರ ದೇಶದವರದಕ್ಕಿಂತ ಕೀಳಾಗಿದೆ ಎಂಬುದು ಮೇಲಿನ ಪಟ್ಟಿಯಿಂದ ಸ್ಪಷ್ಟಪಡುವುದು

ದೇಶದಲ್ಲಿ ಪ್ರತಿವ್ಯಕ್ತಿಯ ಕ್ರಿಯಾಶಕ್ತಿ (output of work) ಮತ್ತು ದೇಶದ ಒಟ್ಟು ಸಂಪತ್ತು ಇವೆರಡನ್ನೂ ಗಣನೆಗೆ ತೆಗೆದು ಕೊಂಡರೆ ಈ ತಾರತಮ್ಯವು ಇನ್ನೂ ವಿಶದವಾಗುವುದು ಈ ವಿಷಯಗಳಲ್ಲಿ ಭರತಖಂಡವನ್ನು ಇತರ ದೇಶಗಳೊಂದಿಗೆ ಹೋಲಿಸಿನೋಡಿದರೆ ನಮ್ಮ ತಾರತಮ್ಯಸ್ಥಾನವು ಈ ರೀತಿ ಇದೆ:




೬ ಮೂರು ದೇಶಗಳ ಒಟ್ಟು ಆರ್ಥಿಕ ಸಂಪತ್ತಿನ ಹೋಲಿಕೆ.

| | ಬೇರೆಬೇರೆ ದೇಶದ ಜನರ ಕ್ರಿಯಾಶಕ್ತಿ[6] | ಒಟ್ಟು ಆರ್ಥಿಕ ಸಂಪತ್ತು[7] |
|---|---|---|
| ಭರತಖಂಡ | $1\frac{1}{2}$ | 12,000 ಕೋಟಿ ರೂಪಾಯಿಗಳು. |

[6] ಅದೇ ಪುಸ್ತಕ, ಪುಟ 26.

[7] ಅದೇ ಪುಸ್ತಕ, ಪುಟ 27.

| | | |
|---|---|---|
| ಜಪಾನ್ | 3½ | |
| ಫ್ರಾನ್ಸ್ | ೮¼ | |
| ಇಂಗ್ಲಂಡು | 18 | 29,432 ಕೋಟಿ ರೂಪಾಯಿಗಳು. |
| ಕೆನಡಾ | 20 | |
| ಅ. ಸಂ ಸಂ. | 30 | 112,315 ,, |

ಇಂಗ್ಲೆಂಡಿನ ಸಂಪತ್ತು ಭರತಖಂಡದ ಸಂಪತ್ತಿನ ಎರಡೂ ವರೆಯಷ್ಟು ಜಾಸ್ತಿಯಾಗಿರುವುದು ವಿಸ್ತೀರ್ಣ ಮತ್ತು ಜನ ಸಂಖ್ಯೆಯಲ್ಲಿ ಇಂಗ್ಲೆಂಡು ಇಂಡಿಯಾದ 1/೨೧ ಮತ್ತು 1/೭ ಎಂಬು ದನ್ನು ಮರಯಕೂಡದು ಅಮೆರಿಕಾದ ಸಂಯುಕ್ತ ಸಂಸ್ಥಾನಗಳ ಸಂಪತ್ತು ಭರತಖಂಡದ ಸಂಪತ್ತಿನ ಒಂಬತ್ತರಷ್ಟಕಿಂತಲೂ ಮೇಲ್ಪಟ್ಟಿರುವುದು ನಮ್ಮ ಕ್ರಿಯಾಶಕ್ತಿಗೂ ಸಂಪತ್ತಿಗೂ ನಿರ್ದಿಷ್ಟವಾದ ಸಂಬಂಧವಿದ, ನಮ್ಮ ಸಂಪತ್ತು ಕಡಮೆಯಾ ಗಿರುವುದು ನಮ್ಮ ಕ್ರಿಯಾಶಕ್ತಿ ಕಡಮೆಯಾಗಿರುವುದರಿಂದ ನಮ್ಮ ಕ್ರಿಯಾಶಕ್ತಿ ಕಡಮೆಯಾಗಿರುವುದಕ್ಕೆ ನಮ್ಮಲ್ಲಿ ಯಂತ್ರೋಪಕರಣಗಳ ಉಪಯೋಗ ಕಡಮೆಯಾಗಿರುವುದೂ ಮತ್ತು ಅವುಗಳನ್ನು ನಡಸುವ ಕುಶಲತೆ ಇಲ್ಲದಿರುವುದೂ ಮುಖ್ಯ ಕಾರಣಗಳಾಗಿವೆ ಇತರ ದೇಶಗಳಲ್ಲಿ ಸಾಮಾನ್ಯ ವಾಗಿ ಯಂತ್ರಗಳು ಮಾಡುವ ಕೆಲಸಗಳನ್ನು ನಮ್ಮ ದೇಶದಲ್ಲಿ ಇನ್ನೂ ಕೈಯಿಂದಲೇ ಮಾಡುತ್ತಿರುವೆವು ಯಂತ್ರಗಳ ಉಪ ಯೋಗ ಹೆಚ್ಚದಲ್ಲದೆ ನಮ್ಮ ಕ್ರಿಯಾಶಕ್ತಿ ಹೆಚ್ಚುವುದಿಲ್ಲ ಅದು ಹೆಚ್ಚದಲ್ಲದೆ ಈಗಿನ ಯಂತ್ರಯುಗದಲ್ಲಿ ನಮ್ಮ ಸಂಪದ ಭಿವೃದ್ಧಿ ಹೇಗೆ ತಾನೆ ಆದೀತು?

ಕೊನೆಯದಾಗಿ, ನಮ್ಮ ದೇಶದ ಆರ್ಥಿಕ ದಶೆಯನ್ನು ವಿಮ ರ್ಶಿಸಲು ಪ್ರಜಾಸಂಖ್ಯೆಯ ಬೆಳವಣಿಗೆಗೆ ಸಂಬಂಧಪಟ್ಟ ಒಂದೆರಡು ವಿಷಯಗಳನ್ನು ಪ್ರಸ್ತಾಪಮಾಡಬೇಕಾಗಿದೆ ಭರತ

ಖಂಡದ ಜನಸಂಖ್ಯೆ ಐವತ್ತು ವರುಷಗಳಲ್ಲಿ ಹತ್ತು ಕೋಟಿ ಹೆಚ್ಚಿದೆ ಈಗಿನ ಮೂವತ್ತೈದು ಕೋಟಿಯು ಮುಂದಿನ ಪ್ರಜಾಗಣನೆಯಲ್ಲಿ ಸುಮಾರು ನಲವತ್ತು ಕೋಟಿಗೆ ಏರಬಹುದೆಂದು ಊಹಿಸಿದ್ದಾರೆ ಆರ್ಥಿಕ ದೃಷ್ಟಿಯಿಂದ ಈ ವಿಷಯವನ್ನವಲೋಕಿಸಿದರೆ ಪ್ರಜಾಸಂಖ್ಯೆ ದೇಶದ ಅರ್ಥೋತ್ಪತ್ತಿಯ ಈಗಿನ ಶಕ್ತಿಗಿಂತ ಅಧಿಕವಾಗಿ ಬೆಳೆಯುತ್ತಿದೆ ಎಂದು ಒಪ್ಪಿಕೊಳ್ಳಬೇಕಾಗುವುದು ಇದರಿಂದ ವಿಧವಿಧವಾದ ಆರ್ಥಿಕ ವ್ಯಾಧಿಗಳು ಆಗಾಗ್ಗೆ ಕಾಣಿಸಿಕೊಳ್ಳಲು ಅವಕಾಶವುಂಟಾಗಿದೆ.

ಪ್ರಜಾಸಂಖ್ಯೆಗೆ ತಕ್ಕಷ್ಟು ಆಹಾರಪದಾರ್ಥಗಳು ಕೂಡ ನಮ್ಮ ದೇಶದಲ್ಲಿ ಒದಗುತ್ತಿಲ್ಲವೆಂದು ಕೆಲವು ಅರ್ಥಶಾಸ್ತ್ರ ಪಂಡಿತರು ಈಚೆಗೆ ವಾದಿಸುತ್ತಿರುವರು ಡಾ|| ರಾಧಾಕಮಲ ಮುಖರ್ಜಿಯವರ ಲೆಕ್ಕಾಚಾರದಂತೆ[8] ಭರತಖಂಡದ ಸ್ಥಿತಿಗತಿಗಳಿಗನುಕೂಲವಾಗಿ ಮನುಷ್ಯನ ಜೀವನಾಧಾರಕ್ಕೆ ಅತ್ಯಾವಶ್ಯಕವಾಗಿ ಬೇಕಾಗುವ ಪ್ರಮಾಣದಲ್ಲಿ ನಮಗೆ ಈಗ ಒದಗುತ್ತಿರುವ ಆಹಾರವನ್ನು ಹಂಚಿದರೆ, ಸುಮಾರು $4\frac{1}{2}$ ಕೋಟಿ ಜನರಿಗೆ ಆಹಾರ ಪದಾರ್ಥಗಳು ಸಾಲದೆ ಬರುವುವು ಅಂದರೆ ನಮ್ಮ ಆಹಾರ ಸಾಮಗ್ರಿಗಳು $30\frac{1}{2}$ ಕೋಟಿ ಜನರಿಗೆ ಸಾಕಾಗುವಷ್ಟು ಮಾತ್ರ ಒದಗುತ್ತಿವೆ ಷಹ ಮತ್ತು ವಟ್ಟಾಲ್ ಎಂಬ ಅರ್ಥಶಾಸ್ತ್ರ ಪಂಡಿತರ ಲೆಕ್ಕಾಚಾರವು ಕೂಡ ಇದೇ ಅಭಿಪ್ರಾಯವನ್ನು ಪುಷ್ಟೀಕರಿಸುವುದು

ಹೆಚ್ಚು ಜನರಿದ್ದು ಸಾಕಾದಷ್ಟು ಆಹಾರಪದಾರ್ಥಗಳಿಲ್ಲ

---

[8] Food Planning for Four Hundred Millions by R K Mookerji, quoted by A Correia Fernandee in his article on "The Population Problem" in The Modern Review, Dec 1938.

ದಿರುವಾಗ ಇಷ್ಟು ದನ್ನೇ ಎಲ್ಲರೂ ಹಂಚಿಕೊಳ್ಳುವುದರಿಂದ ಬಹಳ ಮಂದಿ ಅರೆಹೊಟ್ಟೆ ಊಟಮಾಡಿ ಹಸಿದುಕೊಂಡಿರಬೇಕಾಗಿದೆ. ನಮ್ಮಲ್ಲಿ ಶೇಕಡ ಮೂವತ್ತೊಂಬತ್ತು ಜನರಿಗೆ ಪುಷ್ಟೀ ವಾಗಿಯೂ (well-nourished), ನಲವತ್ತೊಂದು ಜನರಿಗ ತಕ್ಕಮಟ್ಟಿಗೂ (poorly nourished), ಉಳಿದ ಇಪ್ಪತ್ತು ಮಂದಿಗೆ ಅರೆಹೊಟ್ಟೆಯಷ್ಟೂ (badly nourished) ಆಹಾರ ದೊರೆಯುತ್ತಿರುವುದಾಗಿ ಅಧಿಕಾರಯುತವಾಗಿ ವರದಿಯಾಗಿದೆ [9] ಖಾಸಗಿಯಾಗಿ ಅರ್ಥಶಾಸ್ತ್ರ ಪಂಡಿತರುಗಳು ನಡೆಯಿಸಿರುವ ಪರಿಶೋಧನೆಯಿಂದಲೂ ಹೆಚ್ಚುಕಡಮೆ ಇದೇ ರೀತಿಯಾದ ನಿರ್ಣಯವು ಸ್ಥಿರನಡುವುದು ಅವರ ಗಣನೆಯ ಪ್ರಕಾರ ನಮ್ಮಲ್ಲಿ ಶೇಕಡ ಅತ್ಯಧಿಕವಾಗಿ ತಿನ್ನಲು (over-fed) ಇರುವವರು ಇಬ್ಬರು, ಸಮೃದ್ಧಿಯಾಗಿ (ample) ಆಹಾರ ಹೊಂದಿರತಕ್ಕವರು ಹತ್ತುಜನರು, ಸಾಕಾದಷ್ಟು ಮಾತ್ರ (sufficient) ಪಡೆದಿರತಕ್ಕವರು ಮೂವತ್ತು ಜನರು, ಸಾಕಾದಷ್ಟು ಆಹಾರವಿಲ್ಲದಿರುವವರು (less than sufficient) ಉಳಿದ ಐವತ್ತೆಂಟು ಜನರು ಎಂದು ವಿದಿತವಾಗುವುದು

ದೇಶದ ಜನಸಂಖ್ಯೆ ಆಹಾರದ ಉತ್ಪತ್ತಿಯ ಎಲ್ಲೆಯನ್ನು ದಾಟಿದೆ ಎಂಬುದನ್ನು ಕೆಲವರು ಒಪ್ಪುವುದಿಲ್ಲ ಈ ಪ್ರಶ್ನೆ ವಿವಾದಾಸ್ಪದವಾದರೂ ಈಗ ಹೆಚ್ಚುತ್ತಿರುವ ರೀತಿಯಲ್ಲೇ ಪ್ರಜಾಸಂಖ್ಯೆ ಮಾತ್ರ ಬೆಳೆಯುತ್ತಾ ಬಂದು ಅದಕ್ಕೆ ತಕ್ಕಂತೆ ನಮ್ಮ ಅರ್ಥೋತ್ಪತ್ತಿಯನ್ನು ವೃದ್ಧಿಗೊಳಿಸದಿದ್ದಲ್ಲಿ ನಮ್ಮ ದರಿದ್ರಾವಸ್ಥೆ ಇನ್ನೂ ಕೇಡಾಗುವುದು ಈಗಲೇ ಸಮತಟ್ಟಾದ (balanced)

---

[9] Social Service in India, H M Stationery Office P 208

ಆಹಾರವು ಸಾಕಾದಷ್ಟಿಲ್ಲದೆ ಜನರ ದೇಹಬಲವು ಕುಗ್ಗಿದೆ, ಅದು ಇನ್ನೂ ಹೀನಸ್ಥಿತಿಗಿಳಿದು ಜನರು ನಾನಾ ಸಂಕಟಗಳಿಗೀಡಾಗುವುದು ಖಂಡಿತ

ಈ ಶೋಚನೀಯ ಪರಿಸ್ಥಿತಿಯನ್ನು ಉತ್ತಮಪಡಿಸಬೇಕಾದರೆ ನಮ್ಮ ದೇಶದಲ್ಲಿ ವ್ಯವಸಾಯ ಒಂದರಿಂದಲೇ ಜೀವನ ನಡಸುತ್ತಿರುವವರ ಸಂಖ್ಯೆ ಕಡಮೆಯಾಗಿ ಜಮಿನಿನಮೇಲೆ ಈಗಿರುವ ಒತ್ತಡವನ್ನು ಕಡಮೆಮಾಡುವುದು ಮೊದಲನೆಯ ಕೆಲಸ.

---

## ೩. ಪರಿಹಾರ ಸಾಧನಗಳು

ಜಮೀನಿನ ಮೇಲಿನ ಪ್ರಜಾಸಂಖ್ಯೆಯ ಒತ್ತಡವನ್ನು ಕಡಮೆ ಮಾಡಲು ನಾಲ್ಕು ಸಾಧನಗಳಿವೆ [10] 1 ಹೆಚ್ಚು ಜಮೀನನ್ನು ಆಬಾದಿಗೆ ತರುವುದು ಅಥವಾ ಇರತಕ್ಕ ಜಮೀನಿನಲ್ಲೇ ಉತ್ತಮ ರೀತಿಯ (intensive) ಕೃಷಿಯಿಂದ ಎಷ್ಟು ಫಸಲನ್ನು ತೆಗೆಯಬಹುದೋ ಅಷ್ಟನ್ನೂ ಬೆಳೆಯುವುದು 2. ಜನರನ್ನು ಬೇರೆ ಕಸಬುಗಳಲ್ಲಿ ಉದ್ಯುಕ್ತರಾಗುವಂತ ಮಾಡಿ ಜಮೀನಿನ ಮೇಲಿನ ಈಗಿನ ಭಾರವನ್ನು ತಗ್ಗಿಸುವುದು 3 ಜನರನ್ನು ಬೇರ ದೇಶಗಳಿಗೆ ವಲಸೆ ಹೋಗುವಂತೆ ಪ್ರೋತ್ಸಾಹಿಸುವುದು 4 ಪ್ರಜಾಸಂಖ್ಯೆಯ ಬೆಳವಣಿಗೆಯನ್ನು ಕೃತಕ ಮಾರ್ಗಗಳಿಂದ ತಡೆಗಟ್ಟುವುದು

ಮೂರು ಮತ್ತು ನಾಲ್ಕನೆಯ ಪರಿಹಾರ ಮಾರ್ಗಗಳನ್ನು ಮೊದಲು ವಿಚಾರ ಮಾಡೋಣ ಜನರು ಬೇರೆ ದೇಶಗಳಿಗೆ

---

[10] ಅದೇ ಪುಸ್ತಕ, ಪುಟಗಳು. 33-39

ವಲಸೆ ಹೋಗಿ ನೆಲಸುವುದು ಅಷ್ಟು ಸುಲಭ ಸಾಧ್ಯವಲ್ಲ. ನಾವು ಹುಟ್ಟಿದ ಸ್ಥಳವನ್ನು ಬಿಟ್ಟು ಕದಲುವವರಲ್ಲ ಸ್ವಗೃಹ, ಸ್ವಗ್ರಾಮ ಮತ್ತು ಸಂಪ್ರದಾಯ- ಇವುಗಳ ಮೇಲಿನ ವಾತ್ಸಲ್ಯದ ಬೆಸೆಯಿಂದ ಬೇರೆ ಕಡೆಗೆ ಹೋಗಿ ನೆಲಸಲು ಸುಲಭವಾಗಿ ಮನಸ್ಸು ಮಾಡಲಾರೆವು

ಅಲ್ಲದೆ ಹೋಗುವುದು ತಾನೆ ಎಲ್ಲಿಗೆ? ಅದು ಮುಖ್ಯ ಪ್ರಶ್ನೆ ಈಗಾಗಲೇ ದಕ್ಷಿಣ ಮತ್ತು ಪೂರ್ವ ಆಫ್ರಿಕ, ಸಿಂಹಳ ದ್ವೀಪ, ಬರ್ಮ, ಮಲಯ ಫೀಜಿ ಮೊದಲಾದ ದೇಶಗಳಿಗೆ ವಲಸೆ ಹೋಗಿ ನೆಲಸಿರುವ ಭಾರತೀಯರು ಅಲ್ಲಿನ ಸರ್ಕಾರದವರೂ ಜನರೂ ಕೊಡುತ್ತಿರುವ ಕಿರುಕುಳಗಳನ್ನು ಸಹಿಸಲಾರದೆ ಸ್ವದೇಶಕ್ಕೆ ತಂಡತಂಡವಾಗಿ ಹಿಂತಿರುಗುತ್ತಿರುವರು ಬ್ರಿಟಿಷ್ ಚಕ್ರಾಧಿಪತ್ಯದ ಕೆನಡಾ, ಆಸ್ಟ್ರೇಲಿಯಾ ಮುಂತಾದ ರಾಷ್ಟ್ರಗಳಲ್ಲಿ ವಲಸೆ ಹೋಗಿ ನೆಲಸುವವರಿಗೆ ಉತ್ತಮ ಅವಕಾಶಗಳಿದ್ದರೂ ಆಯಾ ರಾಷ್ಟ್ರಗಳ ಸರಕಾರಗಳು ತಂತಮ್ಮ ನಾಗರಿಕತೆಯನ್ನು ಕೆಡದಂತೆ ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಕಪ್ಪು ಜನರು ಆ ದೇಶಗಳಲ್ಲಿ ನೆಲಸಲಾಗದಂತೆ ಕಾನೂನುಗಳನ್ನೇರ್ಪಡಿಸಿರುವರು ಆದುದರಿಂದ, ಮೇಲೆ ಹೇಳಿದ ಸರ್ಕಾರಗಳು ನಮ್ಮ ವಿಷಯದಲ್ಲಿ ಹೆಚ್ಚು ಸಹಾನುಭೂತಿಯನ್ನು ತೋರಿಸಿ ತಮ್ಮ ಕಟ್ಟುಗಳನ್ನು ಸಡಿಲಿಸಿ, ಸರಿಸಮಾನರಂತೆ ನಾವೂ ಅವರೊಡನೆ ವಾಸಿಸಲು ಅವಕಾಶ ಕೊಡುವವರೆಗೂ, ವಲಸೆ ಹೋಗಿ ಜನಸಾಂದ್ರತೆಯನ್ನು ತಗ್ಗಿಸುವ ಪ್ರಯತ್ನವು ಫಲಕಾರಿಯಾಗುವುದಿಲ್ಲ

ಜನಸಂಖ್ಯೆಯ ಬೆಳವಣಿಗೆಯನ್ನು ಕೃತಕ ಮಾರ್ಗಗಳಲ್ಲಿ ತಡೆಗಟ್ಟುವುದು ಸಾಧುವೆಂದೂ ಅತ್ಯಾವಶ್ಯಕವೆಂದೂ ಅನೇಕರ ಅಭಿಪ್ರಾಯ. ಆಜೀವ ಬ್ರಹ್ಮಚರ್ಯ, ಭ್ರೂಣಹತ್ಯ ಮತ್ತು

ಶಿಶುಹತ್ಯೆ ಮುಂತಾದ ಪ್ರಾಚೀನ ಪದ್ಧತಿಗಳೂ ಕೃತಕ ಮಾರ್ಗಗಳೇ. ಆದರೆ ಈಚಿನ ಸಂತಾನ ನಿರೋಧ ಸಲಕರಣೆಗಳ ಉಪಯೋಗದಿಂದ ಪ್ರಜಾಭಿವೃದ್ಧಿಯನ್ನು ತಡೆಗಟ್ಟುವುದು ಸುಲಭಸಾಧ್ಯವಾಗಿರುವಾಗ ರಾಕ್ಷಸೀ ಕೃತ್ಯಗಳಾದ ಭ್ರೂಣಹತ್ಯೆ ಮುಂತಾದ ವಿಧಾನಗಳನ್ನು ಯೋಚಿಸುವ ಆವಶ್ಯಕತೆ ಎಲ್ಲಿದೆ? ಅತ್ಯುತ್ತಮ ಮಾರ್ಗವೆಂದರೆ ಆಜೀವ ಬ್ರಹ್ಮಚರ್ಯ. ಇದು ಕೇವಲ ಕಷ್ಟಸಾಧ್ಯವಾದುದರಿಂದ ಸಂತಾನ ನಿರೋಧ ಸಲಕರಣೆಗಳ ಉಪಯೋಗವೇ ಸಾಧುವಾದ ಮಾರ್ಗವೆಂಬುದು ಅನೇಕ ಅರ್ಥಶಾಸ್ತ್ರ ಪಂಡಿತರುಗಳ ಅಭಿಪ್ರಾಯ. ಸಂತಾನ ನಿರೋಧ ಕ್ರಮಗಳನ್ನನುಸರಿಸುವುದರಿಂದ ಮಿತಸಂತಾನದ ಸುಖ ದೊರೆತು ಆರ್ಥಿಕ ಜೀವನದ ಮಟ್ಟವು ಏರಲು ಅವಕಾಶವಾಗುವುದು. ಮೂರು ಮಕ್ಕಳಿರುವ ಸಂಸಾರಗಳು ಆರ್ಥಿಕ ಪ್ರಗತಿಯ ದೃಷ್ಟಿಯಿಂದ ಆದರ್ಶಪ್ರಾಯವಾದುವೆಂದು ಹಲವರು ಅರ್ಥಶಾಸ್ತ್ರಜ್ಞರ ಅಭಿಪ್ರಾಯ.

ಆದರೆ ಸಂತಾನ ನಿರೋಧಮಾಡಲು ಎಲ್ಲರೂ ಒಪ್ಪುವುದಿಲ್ಲ. ಅಂಥವರ ಅಭಿಪ್ರಾಯದಲ್ಲಿ ಈ ಆಚರಣೆ ಮತಾಚಾರಗಳಿಗೆ, ಸಮಾಜ ಸಂಸ್ಕೃತಿಗೆ ಮತ್ತು ನೈತಿಕಪ್ರಗತಿಗೆ ವಿರುದ್ಧವಾದುದು. ಅಲ್ಲದೆ ಇದರಿಂದ ಪಾಪಭೀತಿ ತೊಲಗಿ ಸ್ವೇಚ್ಛಾಪ್ರವರ್ತನೆಗೆ ಅವಕಾಶವಾಗುವುದೆಂದೂ ಹೇಳುವರು. ಸಂತಾನ ನಿರೋಧಕ್ಕೆ ಪ್ರತಿಯಾಗಿ ಇವರಲ್ಲಿ ಕೆಲವರು ಇನ್ನೊಂದು ಬಗೆಯಾದ ವಾದ ಹೂಡುವುದುಂಟು. ಪ್ರಜಾಸಂಖ್ಯೆ ಹೆಚ್ಚಾಗಿದ್ದರಲ್ಲವೆ ಸಂತಾನ ನಿರೋಧದ ಆವಶ್ಯಕತೆ ಹುಟ್ಟುವುದು? ನಮ್ಮ ದೇಶದ ವಿಸ್ತೀರ್ಣ ಮತ್ತು ಉತ್ಪತ್ತಿಗಳನ್ನು ಗಣನೆಗೆ ತೆಗೆದುಕೊಂಡರೆ ನಮ್ಮ ದೇಶದ ಈಗಿನ ಪ್ರಜಾಸಂಖ್ಯೆ ಮಿತಿಮೀರಿಲ್ಲವೆಂಬುದು ಅವರ ವಾದ. ವಿಸ್ತೀರ್ಣ ಮತ್ತು

ಪ್ರಜಾಸಂಖ್ಯೆಯಲ್ಲಿ ಭರತಖಂಡದ ಕೆಲವು ಪ್ರಾಂತಗಳು ಯೂರೋಪ್‌ಖಂಡದ ಕೆಲವು ದೇಶಗಳಿಗೆ ಸರಿಹೋಗತಕ್ಕ ವಾಗಿವೆ ಉದಾಹರಣೆಗಾಗಿ ಈ ಕೆಳಗಿನ ಪಟ್ಟಿಯಲ್ಲಿ ಕಾಣ ಬರುವಂತೆ, ಇಂಡಿಯಾದೇಶದ ಎರಡು ಮುಖ್ಯ ಪ್ರಾಂತಗಳು ಯೂರೋಪಿನ ಎರಡು ಮುಖ್ಯದೇಶಗಳನ್ನು ಬಹುಮಟ್ಟಿಗೆ ಹೋಲುತ್ತವೆ

| ಹೆಸರು | ವಿಸ್ತೀರ್ಣ ಚ ಮೈಲಿಗಳು | ಜನಸಂಖ್ಯೆ |
|---|---|---|
| ಬಂಗಾಳ | 78,000 | 5.0 ಕೋಟಿ. |
| ಇಂಗ್ಲಂಡು | 89,000 | 4 5 ,, |
| ಮಧ್ಯಪ್ರಾಂತಗಳು | 106,000 | 4 5 ,, |
| ಇಟಲಿ | 120,000 | 4 2 ,, |

ಆದರೆ ಈ ಸಮಸ್ಯೆಯನ್ನು ವಿಚಾರಮಾಡುವಾಗ ಭರತಖಂಡ ವನ್ನೆಲ್ಲಾ ಯೂರೋಪುಖಂಡದ ಸಣ್ಣಪುಟ್ಟ ದೇಶಗಳೊಡನೆ ಹೋಲಿಸಿ ಮಾತನಾಡುವುದು ಸರಿಯಲ್ಲ, ಇದರಿಂದ ನಾವು ತಪ್ಪು ತೀರ್ಮಾನಗಳಿಗೆ ಬರುವ ಸಂಭವ ಹೆಚ್ಚು ನಮ್ಮ ದೇಶದ ಈಗಿನ ಬಡತನವು ಉಪಪತ್ತಿಯಿಲ್ಲದೆ ಉಂಟಾದುದಲ್ಲ ಆರ್ಥಿಕ ರಚನೆ ಊನವಾಗಿರುವುದರಿಂದ, ಸಮೃದ್ಧಿಯಿದ್ದರೂ ಹೊಟ್ಟೆಗಿಲ್ಲದೆ ಸಾಯುವಂತಾಗಿದೆ ಕೈಗಾರಿಕೆ ಮತ್ತು ವ್ಯವಸಾಯಗಳೆರಡನ್ನೂ ಸರಕಾರದ ಬೆಂಬಲ ಪಡೆದು ಸುವ್ಯವಸ್ಥಿತ ಮಾರ್ಗದಲ್ಲಿ ಏರ್ಪಡಿಸಿದರೆ ನಮ್ಮ ಬಡತನವು ನೀಗುವುದು ಖಂಡಿತ ಇದೇ ಅವರ ಮೊದಲನೆಯ ವಾದದ ತಿರುಳು ನಮ್ಮ ದೇಶದ ಪ್ರಜಾಸಂಖ್ಯೆಯ ಬೆಳವಣಿಗೆಯ ಪ್ರಮಾಣವು ಇಂಗ್ಲೆಂಡಿನ ಬೆಳವಣಿಗೆಯ ಪ್ರಮಾಣಕ್ಕಿಂತ ಹೆಚ್ಚಲ್ಲವೆಂದು ಅವರ ಎರಡನೆಯ ವಾದ: ಕಳೆದ ಐವತ್ತು ವರ್ಷಗಳಲ್ಲಿ ಇಂಗ್ಲೆಂಡಿನಲ್ಲಿ ಶೇಕಡ 53 8 ರಷ್ಟು ಜನ

ಸಂಖ್ಯೆ ಹೆಚ್ಚಿದೆ ಅದೇ ಕಾಲದಲ್ಲಿ ನಮ್ಮ ದೇಶದಲ್ಲಿ ಶೇಕಡ 39 ರಷ್ಟು ಮಾತ್ರ ಹೆಚ್ಚಿದೆ ಆದುದರಿಂದ ನಮ್ಮ



೭. ಭರತಖಂಡದ ಮತ್ತು ಯೂರೋಪಿನ ದೇಶಗಳ ವಿಸ್ತೀರ್ಣ ಮತ್ತು ಜನಸಂಖ್ಯೆಯ ಹೋಲಿಕೆ.

ಪ್ರಜಾಸಂಖ್ಯೆಯ ಬೆಳವಣಿಗೆಯಲ್ಲಿ ಅತಿಶಯವೇನೂ ಕಾಣ ಬರುವುದಿಲ್ಲ

ಸಂತಾನ ನಿರೋಧ ಪದ್ಧತಿಯನ್ನು ವಿರೋಧಿಸುವವರು

ವಾದವನ್ನು ಎದುರಿಸುವುದು ಅಷ್ಟು ಸುಲಭವಲ್ಲ. ಆದರೆ ಈ ವಿಷಯವನ್ನು ಹೆಚ್ಚು ಚರ್ಚೆಮಾಡದೆ ಹೀಗೆ ಮುಕ್ತಾಯ ಮಾಡಬಹುದು ನಮ್ಮ ಒಟ್ಟು ಅರ್ಥೋತ್ಪತ್ತಿಯನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸಿದರೆ ತಲೆಗೆ ಎಷ್ಟು ವರಮಾನ ಎನ್ನುವುದು ಗೊತ್ತಾಗುವುದು ಅರ್ಥೋತ್ಪತ್ತಿ ಒಂದೇ ನಮ ನಿದ್ದು ಪ್ರಜಾಸಂಖ್ಯೆಯು ಒತ್ತಡ ಹೆಚ್ಚಾದರ ತಲೆ ವರಮಾನವು ಕಡಮೆಯಾಗುವುದು ಆದರ ಎಲ್ಲರ ಉದ್ದೇಶವು ಇದನ್ನು ಹೆಚ್ಚಿಸ ಬೇಕೆಂದೇ ಹೊರತು ಕಡಮೆಮಾಡಬೇಕೆಂದಲ್ಲ ಇದನ್ನು ಸಾಧಿಸಲು, ಹಲವು ವಿಧದಲ್ಲಿ ಪ್ರಜಾಸಂಖ್ಯೆಯು ಬೆಳವಣಿಗೆಯ ಪ್ರಮಾಣವನ್ನು ಕಡಮೆಮಾಡುವುದು ಆವಶ್ಯಕ ಆದರೆ ವ ಮಾನವನ್ನು ಹೆಚ್ಚಿಸುವುದಕ್ಕೆ ಪ್ರಜಾಸಂಖ್ಯೆಯನ್ನು ಕಡಮೆ ಮಾಡುವುದೊಂದೇ ಮಾರ್ಗವಲ್ಲ, ಅರ್ಥೋತ್ಪತ್ತಿಯನ್ನು ಹೆಚ್ಚಿಸುವುದೂ ಒಂದು ಮಾರ್ಗ ಈ ಎರಡು ಮಾರ್ಗಗಳು ಜೊತೆಜೊತೆಯಲ್ಲಿ ಸಾಗಿದರೆ ನಮ್ಮ ಉದ್ದೇಶವು ಜಾಗ್ರ ಯಾಗಿ ಕೈಗೂಡುವುದು [12]

ಇನ್ನುಳಿದಿರುವ ಎರಡು ಸಾಧನಗಳನ್ನು ಪರಿಶೀಲಿಸೋಣ ವ್ಯವಸಾಯದ ಉತ್ಪತ್ತಿಯನ್ನು ಹೆಚ್ಚಿಸುವುದು ಮತ್ತು ಕೈಗಾ ರಿಕೆಗಳನ್ನು ವೃದ್ಧಿಗೊಳಿಸಿ ಅವುಗಳಿಂದ ಹೆಚ್ಚು ಜನಕ್ಕೆ ಜೀವ ನೋಪಾಯವನ್ನು ಕಲ್ಪಿಸುವುದು ಇವೆರಡಕ್ಕೂ ನಿಕಟ ಸಂಬಂಧವಿರುವುದರಿಂದ ಒಟ್ಟಿಗೆ ವಿಚಾರ ಮಾಡಬಹುದು ಅರ್ಥೋತ್ಪತ್ತಿಯ ಏಳಿಗೆಗ ಸರ್ಕಾರದ ಬೆಂಬಲವು ಅತ್ಯಾವಶ್ಯ ವಾದುದರಿಂದ ಸ್ವತಂತ್ರವಾಗಿರುವ ದೇಶಗಳಲ್ಲಿ ಸರ್ಕಾರದ ಸಹಾ ಯದಿಂದ ಆರ್ಥಿಕಾಭಿವೃದ್ಧಿಯಾಗುವಂತೆ ಪರಾಧೀನದಲ್ಲಿರು

---

[12] Some Aspects of Economic Planning, by N S Subba Rao, P. 207

ನಮ್ಮ ದೇಶದಲ್ಲಿ ಆಗಲಾರದು ನಮ್ಮ ದೇಶವು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ಕಾಲದಿಂದಲೂ ಇಂಡಿಯಾ ಸರ್ಕಾರ ದವರು ತಮ್ಮ ಆರ್ಥಿಕ ನೀತಿಯನ್ನು ದೇಶೀಯರ ಹಿತದೃಷ್ಟಿ ಯಿಂದ ರೂಪುಗೊಳಿಸದೆ ಇಂಗ್ಲೆಂಡಿನ ಜನರ ಅಭಿವೃದ್ಧಿಗಾಗಿ ಹವಣಿಸಿಕೊಂಡಿರುವರು. ಇಂಗ್ಲೆಂಡಿನ ಕೈಗಾರಿಕಗಳು ಬೆಳೆ ದಂತೆಲ್ಲ ಭರತಖಂಡದ ಕೈಗಾರಿಕೆಗಳು ಕ್ಷಯಿಸಿ ಹೆಚ್ಚು ಹೆಚ್ಚು ಜನರು ಕೃಷಿಯ ಕಡೆಗೆ ತಿರುಗಬೇಕಾಯಿತು ಉದ್ದೇಶ ಪೂರ್ವಕವಾಗಿಯೇ ಈ ರೀತಿ ಏರ್ಪಟಾಯಿತೆಂದರೂ ತಪ್ಪಾಗ ಲಾರದು 1813ನೆಯ ಇಸವಿಯಿಂದ ಇಂಗ್ಲೆಂಡು-ಭರತ ಖಂಡಗಳ ವ್ಯಾಪಾರವನ್ನು ಈಸ್ಟ್ ಇಂಡಿಯಾ ಕಂಪನಿಯ ಸರ್ವಾಧಿಕಾರದಿಂದ ತಪ್ಪಿಸಿ ವರ್ತಕರೆಲ್ಲರಿಗೂ ವ್ಯಾಪಾರ ಮಾಡುವ ಅವಕಾಶಕೊಟ್ಟಾಗಿನಿಂದ ನಮ್ಮ ದೇಶಕ್ಕೆ ಯಥೇ ಚ್ಛವಾಗಿ ಇಂಗ್ಲೆಂಡಿನಿಂದ ಕೃಗಾರಿಕೆ ಸಾಮಾನುಗಳು ಬರಲಾ ರಂಭವಾಯಿತು 1813 ರಿಂದ 1828ರ ವರೆಗೆ ಅಂದರೆ ಹದಿ ನೈದು ವರ್ಷಗಳಲ್ಲಿ ನಾಲ್ಕು ಕೋಟಿ ಮೂವತ್ತೈದು ಲಕ್ಷ ಗಜ ಗಳ ಬಟ್ಟೆಯು ಇಂಗ್ಲೆಂಡಿನಿಂದ ಇಂಡಿಯಾ ದೇಶಕ್ಕೆ ಆಮ ದಾಯಿತು ಅಲ್ಲಿಂದ ಇಲ್ಲಿಯವರೆಗ ಒಂದೇ ಸಮನಾಗಿ ಇಂಗ್ಲೆಂಡಿನಲ್ಲಿ ತಯಾರಾದ ಸಾಮಾನುಗಳು ನಮ್ಮ ದೇಶಕ್ಕೆ ಬಂದು ಬೀಳುತ್ತಿವೆ. ರಾಜಕೀಯ ದಣಿಗಳಾದ ಇಂಗ್ಲೀಷಿ ನವರ ಆರ್ಥಿಕ ಹಿತದಲ್ಲಿ ದುಡಿಯುವುದೇ ನಮ್ಮ ಹಣೆಯಬರಹ ವಾಗಿವೆ ಹತ್ತೊಂಭತ್ತನೆಯ ಶತಮಾನದ ಆದಿಯಲ್ಲಿ ಇಂಡಿಯಾ ದೇಶದವೆಂದು ಪ್ರಸಿದ್ಧಿ ಪಡೆದಿದ್ದ ನೀಲಿ, ಪೆಟ್ಲುಪ್ಪು, ರೇಷ್ಮೆ ಮತ್ತು ಹತ್ತಿಯ ಬಟ್ಟೆಗಳು ಇಂಗ್ಲಂಡಿಗೆ ರಫ್ತಾಗುತ್ತಿದ್ದುವು. ಅವಕ್ಕೆ ಪ್ರತಿಯಾಗಿ ಚಿನ್ನ, ಬೆಳ್ಳಿ, ನಾಣ್ಯ, ಉಣ್ಣೆಬಟ್ಟೆ, ವಿವಿಧ ನವೀನ ವಸ್ತುಗಳು (Novelties) ಮತ್ತು ಇತರ ಚಿಲ್ಲರೆ

ಕೈಗಾರಿಕೆ ಸಾಮಾನುಗಳು ಆಮದಾಗುತ್ತಿದ್ದುವು. ಆವೇ ಶತಮಾನದ ಅಂತ್ಯಭಾಗದಲ್ಲಿ ಪರಿಸ್ಥಿತಿಯು ತಲೆಕೆಳಗಾಯಿತು. ಇತರ ದೇಶಗಳ ಕೈಗಾರಿಕೆಯ ಸಾಮಾನುಗಳನ್ನು ಅಖಂಡವಾಗಿ ನಮ್ಮ ದೇಶಕ್ಕೆ ಆಮದು ಮಾಡಿಕೊಂಡು ಅದಕ್ಕೆ ಪ್ರತಿಯಾಗಿ ನಮ್ಮ ದೇಶದ ಆಹಾರ ಸಾಮಗ್ರಿಗಳನ್ನೂ ಕಚ್ಚಾ ಸಾಮಾನುಗಳನ್ನೂ ಹೊರದೇಶಗಳಿಗೆ ರಫ್ತುಮಾಡುವ ಸ್ಥಿತಿ ಒದಗಿತು. ಈ ಬದಲಾವಣೆಯ ಪರಿಣಾಮವಾಗಿ ನಮ್ಮ ಆಹಾರ, ಉಡುಪು, ಮನೆಯಲ್ಲಿ ಬಳಸುವ ಸಾಮಾನುಗಳು, ಎಲ್ಲವೂ ರೂಪಾಂತರಹೊಂದಿ ಪರದೇಶೀ ಸಾಮಾನುಗಳು ಹಳ್ಳಿಹಳ್ಳಿಗೂ ಬಂದುಬಿದ್ದು ನಮ್ಮ ಸ್ವದೇಶೀಯ ಕೈಗಾರಿಕೆ ಕಸಬುಗಳು ಮೂಲೆಗೆ ಬೀಳುವಂತಾಯಿತು ಈಚೀಚೆಗಂತೂ ಮೋಟಾರು ವಾಹನಗಳ ಸಂಚಾರ ಬಳಕೆಗೆ ಬಂದಮೇಲೆ ಪರದೇಶದ ಸಾಮಾನುಗಳ ಉಪಯೋಗ ಹೆಚ್ಚಲು ಮತ್ತಷ್ಟು ಅವಕಾಶವಾಯಿತು ಪರದೇಶೀಬಟ್ಟೆ, ಸೀಮೆಯೆಣ್ಣೆ, ಲಾಂದ್ರಗಳು, ಗಾಜಿನ ಸಾಮಾನುಗಳು, ದೀಪದಕಡ್ಡಿ, ಹೊಲಿಯುವ ಯಂತ್ರ, ಬೈಸಿಕಲ್ ಮುಂತಾದ ಹೊರದೇಶದ ಸಾಮಾನುಗಳು ಗ್ರಾಮ ಗ್ರಾಮಗಳಲ್ಲೂ ಸರ್ವಸಾಧಾರಣವಾಗಿಬಿಟ್ಟಿವೆ. ಇವು ನಮ್ಮ ದೇಶದ ದುಸ್ಥಿತಿಯ ಲಕ್ಷಣಗಳು, ಆರ್ಥಿಕ ಪ್ರಗತಿಯ ಲಕ್ಷಣಗಳೆಂದು ಯಾರೂ ಮೋಸಹೋಗಬಾರದು

ಇಂಡಿಯಾ ಸರ್ಕಾರವು ತನ್ನ ಆರ್ಥಿಕ ಆಡಳಿತವನ್ನು ಭಾರತೀಯರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ನಡಸಿಕೊಂಡು ಬರಬೇಕಾಗಿದ್ದಿತು ಅದರ ಬದಲು ಇಂಗ್ಲೆಂಡಿನ ಹಿತವನ್ನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಕಾಪಾಡುವ ಉದ್ದೇಶದಿಂದ ಮೇಲಿಂದ ಮೇಲೆ ಭಾರತೀಯರಿಗೆ ಆರ್ಥಿಕ ಅನ್ಯಾಯಗಳನ್ನು ಮಾಡುತ್ತಿದೆ 1894ರಲ್ಲಿ ಇಂಡಿಯಾ ಸರ್ಕಾರವು ಪರ

ಮಾನವನ್ನು ಹೆಚ್ಚಿಸುವ ಉದ್ದೇಶದಿಂದ ಆಮದಾಗಿ ಬಂದ ಬಟ್ಟೆಗಳ ಮೇಲೆ ಸುಂಕವನ್ನು ವಿಧಿಸಿದಾಗ, ಇಂಡಿಯಾ ಸರ್ಕಾರಕ್ಕೆ ಪ್ರತಿಯಾಗಿ ಇಂಗ್ಲೆಂಡಿನಲ್ಲಿ ಪ್ರಚಂಡ ಚಳವಳಿ ಎದ್ದಿತು ಇದನ್ನು ಸಮಾಧಾನಪಡಿಸಲು ಇಂಡಿಯಾ ಸರ್ಕಾರದವರು ನಮ್ಮ ದೇಶದಲ್ಲಿ ತಯಾರಾದ ಗಿರಣಿಬಟ್ಟೆಗಳ ಮೇಲೂ ಅಷ್ಟೇ ದರದ ಒಳದೇಶದ ಆಬ್ಕಾರಿ ಸುಂಕವನ್ನು ವಿಧಿಸಬೇಕಾಯಿತು ಇಂಗ್ಲೆಂಡಿನಲ್ಲಿ ತಯಾರಾದ ಸಾಮಾನುಗಳನ್ನು ಕೊಳ್ಳುವುದೇ ನಮ್ಮ ವಿಧಿಯಾಯಿತು ದೇಶದಲ್ಲಿ ಕೈಗಾರಿಕೆಯ ಅಭಿವೃದ್ಧಿಗೆ ಎಲ್ಲಾ ವಿಧದಲ್ಲೂ ಸರ್ಕಾರದವರು ಎಡರುಗಳನ್ನು ತಂದೊಡ್ಡುತ್ತಿದ್ದರು ಇಂಗ್ಲೆಂಡಿನ ಬಾಲ ಕಚ್ಚಿಕೊಂಡಿರುವುದೇ ನಮ್ಮ ಗತಿಯಾಯಿತು ಮೊನ್ನೆ ಮೊನ್ನೆಯವರಗೂ ಈ ಪರಿಸ್ಥಿತಿಯು ಬದಲಾವಣೆಯಾಗಲಿಲ್ಲ ಪ್ರಾಂತ ಸರ್ಕಾರಗಳು ಯಾವುದಾದರೂ ಪ್ರಗತಿದಾಯಕವಾದ ಕೈಗಾರಿಕೆ ಉದ್ಯಮಗಳನ್ನು ಕೈಗೊಂಡರೆ ಮೇಲಿನಧಿಕಾರಿಗಳು ಅದನ್ನು ತಳ್ಳಿ ಹಾಕುವುದು ವಾಡಿಕೆಯಾಯಿತು ಉದಾಹರಣೆಗೆ ಒಂದು ನಿದರ್ಶನವನ್ನು ತಿಳಿಸಿದರೆ ಸಾಕು ಮದ್ರಾಸು ಸರ್ಕಾರದವರು ಸರ್ ಆಲ್ಫ್ರೆಡ್ ಚಾಟರ್‌ಟನ್[13] ಎಂಬವರ ಪ್ರೇರಣೆಯ ಮೇಲೆ ಕೈಗಾರಿಕೆ ಇಲಾಖೆಯೊಂದನ್ನು ಏರ್ಪಡಿಸಿ ಅದರ ಜೊತೆಯಲ್ಲೇ ಅಲ್ಯೂಮಿನಂ ಪಾತ್ರೆಗಳನ್ನು ತಯಾರಿಸುವ ಕಾರ್ಖಾನೆಯೊಂದನ್ನು ಸ್ಥಾಪಿಸಿದಾಗ, ಇಂಡಿಯಾ ಸೆಕ್ರೆಟರಿಗ

[13] ಇವರು ಮದ್ರಾಸು ಸರ್ಕಾರದ ಕೆಲಸದಿಂದ ನಿವೃತ್ತರಾದನಂತರ ನಮ್ಮ ಸಂಸ್ಥಾನದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಮುಖ್ಯಾಧಿಕಾರಿಗಳಾಗಿ ಕೆಲವು ವರುಷಗಳು ಕೆಲಸಮಾಡಿದರು ನಮ್ಮ ಸಂಸ್ಥಾನದ ಕೈಗಾರಿಕೆಯ ಈಗಿನ ಪ್ರಗತಿಗೆ ಈ ಮಹನೀಯರು ಸಲ್ಲಿಸಿದ ಸೇವೆಯು ಅಮೂಲ್ಯವಾದುದು

ಳಾಗಿದ್ದ ಲಾರ್ಡ್ ಮಾರ್ಲೆ ಅವರು, (ಈ ಮಹನೀಯರು ಬಹಳ ಉದಾರ ಮನೋಭಾವನೆಯುವರೆಂದೂ ಭಾರತೀಯರ ಹಿತಕಾಂಕ್ಷಿಗಳೆಂದೂ ಕಲವು ರಾಜಕೀಯ ಸುಧಾರಣೆಗಳಿಗೆ ಕಾರಣಕರ್ತರೆಂದೂ ಪ್ರಸಿದ್ಧರಾಗಿದ್ದವರು) ಕೈಗಾರಿಕೆ ಇಲಾಖೆ ಯನ್ನು ಮುಚ್ಚಬೇಕೆಂದೂ, ಅಲ್ಯೂಮಿನಂ ಕಾರ್ಖಾನೆಯನ್ನು ಖಾನಗೀ ಆಡಳಿತಕ್ಕೆ ಒಪ್ಪಿಸಬೇಕೆಂದೂ 1910 ರಲ್ಲಿ ಅಪ್ಪಣೆ ಮಾಡಿದರು ಇಂಡಿಯಾ ಸರ್ಕಾರದ ಆರ್ಥಿಕ ನೀತಿರೀತಿಗಳು ದೇಶದ ಪ್ರಗತಿಗೆ ಅಡ್ಡಿತರತಕ್ಕವೆಂಬುದಕ್ಕೆ ಇದಕ್ಕಿಂತ ಮತ್ತೊಂದು ನಿದರ್ಶನಬೇಕೆ?

ಆದುದರಿಂದಲೇ ನಮ್ಮ ದೇಶದ ರಾಜಕೀಯ ಮುಖಂಡರು ನಮ್ಮ ಪ್ರಗತಿಗೆ ಮುಖ್ಯವಾಗಿ ರಾಜಕೀಯ ಸ್ವಾತಂತ್ರ್ಯವು ಆವಶ್ಯಕವೆಂದು ಸಾರುತ್ತಿರುವುದು ಸರ್ಕಾರದ ಆಶ್ರಯ, ಸುಂಕ, ತೆರಿಗೆ, ವಿನಿಮಯ, ನಾಣ್ಯ ಮತ್ತು ನೋಟುಗಳ ಚಲಾವಣೆ, ಕಾನೂನು, ಇವೇ ಮುಂತಾದ ಹಲವಾರು ಬಾಬುಗಳಲ್ಲಿ ಇಂಡಿಯಾ ಸರ್ಕಾರದವರಿಗೆ ಭಾರತೀಯರ ಆರ್ಥಿಕ ಜೀವನದ ಮೇಲೆ ಹತೋಟಿ ಇದೆ ಈ ಹತೋ ಟಿಯನ್ನು ಇಂಗ್ಲೆಂಡಿನ ಹಿತಕ್ಕಾಗಿಯೇ ಉಪಯೋಗಿಸಿ ಭಾರತೀಯರ ಹಿತವನ್ನು ಬಯಸದಿರುವುದು ಸಾಮಾನ್ಯವಾಗಿದೆ

ಆದರೆ ರಾಜಕೀಯ ಸ್ವಾತಂತ್ರ್ಯ ಬಂದಹೊರತು ನಮ್ಮ ಆರ್ಥಿಕ ಜೀವನವನ್ನು ಉತ್ತಮಪಡಿಸಲು ಉದ್ಯುಕ್ತರಾಗದೆ ಸುಮ್ಮನಿರುವುದು ಸಾಹಸಿಗಳ ಲಕ್ಷಣವಲ್ಲ, ಎಷ್ಟೇ ಎಡರು ಗಳು ಇದ್ದರೂ ಅವುಗಳನ್ನೆಲ್ಲಾ ಮೆಟ್ಟಿನಿಂತು ಕಲಸಮಾಡ ಬೇಕಾದುದು ನಮ್ಮ ಕರ್ತವ್ಯ ಇದನ್ನರಿತೇ ನಮ್ಮ ದೇಶ ಭಕ್ತರುಗಳು ಮೊದಲಿಂದಲೂ ರಾಜಕೀಯ ಹೋರಾಟದೊಂ ದಿಗೆ ರಚನಾತ್ಮಕವಾದ ಕಾರ್ಯಕ್ರಮಗಳನ್ನೂ ಕೈಕೊಂಡು

ನಡೆಸುತ್ತಿರುವರು ನಾವಾಗಿಯೇ ಇತರರ ಸಹಾಯವಿಲ್ಲದ ಮಾಡಬೇಕಾದ ಕೆಲಸಗಳು ಅನೇಕವಿವೆ ಅವುಗಳನ್ನಾದರೂ ನಾವು ಒಗ್ಗಟ್ಟಿನಿಂದ ಒಮ್ಮನಸ್ಸಿನಿಂದ ಸಾಧಿಸಲುದ್ಯುಕ್ತರಾದರೆ ನಮ್ಮ ಆರ್ಥಿಕಸ್ಥಿತಿಯು ಬಹುಮಟ್ಟಿಗೆ ಮುಂದುವರಿದು ರಾಜಕೀಯ ಮತ್ತು ಸಾಮಾಜಿಕ ಪ್ರಗತಿಯನ್ನು ಸಾಧಿಸಲು ಅವಕಾಶ ದೊರೆಯುವುದು

---

## ೪. ಏಳಿಗೆಯ ಮಾರ್ಗ

ನಮ್ಮ ಆರ್ಥಿಕ ಸ್ಥಿತಿಯು ತೀರ ಶೋಚನೀಯವಾದುದೆಂಬುದು ನಿರ್ವಿವಾದ ವಿಷಯ ಎದೆಗುಂದಿಸುವ ಈ ಪರಿಸ್ಥಿತಿಯನ್ನು ಉತ್ತಮಪಡಿಸಬೇಕಾದಲ್ಲಿ ಮೊಟ್ಟಮೊದಲು ನಮ್ಮ ಆರ್ಥಿಕ ದೃಷ್ಟಿಕೋನವು ಬದಲಾಯಿಸಬೇಕು ನಮ್ಮ ಸ್ಥಿತಿಯು ಉತ್ತಮವಾಗಬೇಕಾದರೆ ನಮ್ಮ ಈಗಿನ ಒಮ್ಮುಖದ ಮತ್ತು ಸಂಕುಚಿತವಾದ ಆರ್ಥಿಕ ಪರಿಸ್ಥಿತಿಯನ್ನು ಮಾರ್ಪಡಿಸಿ ಕೈಗಾರಿಕೆಗೂ ವ್ಯವಸಾಯಕ್ಕೂ ಸಮಾನ ಪ್ರಾಮುಖ್ಯವನ್ನು ಕೊಡಬೇಕು ಸಂಯುಕ್ತಸಂಸ್ಥಾನಗಳಲ್ಲೂ ಫ್ರಾನ್ಸ್‌ದೇಶದಲ್ಲೂ ಇರುವಂತೆ ಸಮತೂಕವಾದ ಮತ್ತು ಚಿರಸ್ಥಾಯಿಯಾದ (balanced and stable) ಆರ್ಥಿಕ ಪರಿಸ್ಥಿತಿಯನ್ನು ಸಾಧಿಸಲು ಬದ್ಧಕಂಕಣರಾಗಬೇಕು ಕೈಗಾರಿಕೆಯ ಬೆಳವಣಿಗೆಗಾಗಿ ವೀರಾವೇಶದಿಂದ ಹೋರಾಡಿದ ವಿನಾ ಜನಗಳ ಜೀವನದ ಮಟ್ಟವನ್ನು ಹೆಚ್ಚಿಸುವುದು ಅಸಾಧ್ಯ ಈ ಸಲಹೆಯು ಹೊಸದೇನೂ ಅಲ್ಲ 1880 ರಲ್ಲೇ ಇಂಡಿಯಾ ಸರ್ಕಾರದವರಿಂದ ನೇಮಿಸ

ಲ್ಪಟ್ಟ ಕ್ಷಾಮನಿವಾರಣಾ ಸಮಿತಿಯವರು ತಮ್ಮ ವರದಿಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿರುವರು ಅವರ ಅಮೂಲ್ಯವಾದ ಸಲಹೆ ಈರೀತಿ ಇದೆ "ಭರತಖಂಡದ ಜನರ ಬಡತನಕ್ಕೂ ಅವರು ಕ್ಷಾಮಗಾಲದಲ್ಲಿ ಒಳಗಾಗತಕ್ಕ ಕಂಟಕಗಳಿಗೂ ಮುಖ್ಯಕಾರಣವೇನೆಂದರೆ, ವ್ಯವಸಾಯವೊಂದೇ ಪ್ರಜಾಸಾಮಾನ್ಯಕ್ಕೆ ಜೀವನಾಧಾರವಾದ ಕಸಬಾಗಿರತಕ್ಕ ನಿರ್ಭಾಗ್ಯಪರಿಸ್ಥಿತಿ; ಈಗಿನ ಹಾನಿಗಳಿಗೆ ಪರಿಹಾರಮಾರ್ಗಗಳನ್ನೇರ್ಪಡಿಸುವುದರಲ್ಲಿ ವಿವಿಧ ಕಸಬುಗಳನ್ನೇರ್ಪಡಿಸಿ ಆಮೂಲಕ ವ್ಯವಸಾಯದಿಂದ ಜೀವಿಸತಕ್ಕ ಹೆಚ್ಚಿಗೆ ಜನರನ್ನು ಬೇರೆಮಾರ್ಗಕ್ಕೆ ಎಳೆಯಬೇಕು, ಇಲ್ಲದಿದ್ದಲ್ಲಿ ಯಾವ ಪರಿಹಾರವೇ ಆಗಲಿ ಫಲದಾಯಕವಾಗಲಾರದು ಈ ಹೆಚ್ಚಿಗೆ ಜನರನ್ನು ಕೈಗಾರಿಕೆಯ ಕಡೆಗೋ ಅಥವ ಅದೇತರಹ ಇತರ ಕಸಬಿಗೋ ಕರೆದೊಯ್ಯಬೇಕು" ಆಗಿನ ಪ್ರಜಾಸಂಖ್ಯೆಯು 24 4 ಕೋಟಿ ಮಾತ್ರವಿದ್ದು, ವ್ಯವಸಾಯದಿಂದ ಜೀವಿಸುತ್ತಿದ್ದವರ ಸಂಖ್ಯೆಯು ಶೇಕಡ ಅರವತ್ತಕ್ಕಿಂತ ಕಡಮೆಯಾಗಿತ್ತು ಆಗಲೇ ನಮ್ಮ ದೇಶದಲ್ಲಿ ಸುಲಭವಾಗಿ ಸ್ಥಾಪಿಸಬಹುದಾದ ಕೈಗಾರಿಕೆಗಳಲ್ಲಿ ಮುಖ್ಯವಾದುವುಗಳೆಂದು ಈ ಸಾಮಾನುಗಳ ತಯಾರಿಕೆಯನ್ನು ನಮೂದಿಸಿದರು—ಸಕ್ಕರೆ, ಹದಮಾಡಿದ ಚಕ್ಕಳ, ಹತ್ತಿ, ತುಪ್ಪಟದ ಮತ್ತು ರೇಷ್ಮೆಯಬಟ್ಟೆಗಳು, ಇತರ ವಿಧದ ದಾರಗಳು, ಹೊಗೆಸೊಪ್ಪು, ಕಾಗದ, ಪಿಂಗಾಣಿಸಾಮಾನುಗಳು, ಗಾಜು, ಸಾಬೂನು, ಎಣ್ಣೆಗಳು ಮತ್ತು ಮೇಣದ ಬತ್ತಿಗಳು

ಅರುವತ್ತುವರ್ಷಗಳ ಹಿಂದೆಯೇ ಈ ರೀತ ಹೇಳಿದ್ದರೂ, ನಮ್ಮ ದೇಶದ ಕೆಲವು ಹಿರಿಯರು ಮತ್ತು ದೊಡ್ಡ ಹುದ್ದೇದಾರರುಗಳು ಕೈಗಾರಿಕೆ ಅಭಿವೃದ್ಧಿಯನ್ನು ಅಲ್ಲಗಳೆಯುತ್ತಾ ದೇಶವು ವ್ಯವಸಾಯಕ್ಕೆ ಮಾತ್ರ ತಕ್ಕುದಾಗಿದೆ ಎಂದೂ, ನಮ್ಮ

ಮುಂದಿನ ಪ್ರಗತಿಯು ಅದರ ಅಭಿವೃದ್ಧಿಯೊಂದರ ಮೇಲೆ ನಿಂತಿರುವುದೆಂದೂ ವಾದಿಸುತ್ತಿರುವರು[14] ಈ ವಾದಕ್ಕೆ ಮನನ್ನೊಪ್ಪುವ ಆಧಾರಗಳೇನೂ ಕಾಣಬರುವುದಿಲ್ಲ ಪ್ರಗತಿದಾಯಕವಾದ ಎಲ್ಲಾ ದೇಶಗಳ ಆರ್ಥಿಕಾಭಿವೃದ್ಧಿಯೂ ಕೈಗಾರಿಕೆಗಳ ಏಳಿಗೆಯ ಮೂಲಕವೇ ಕೈಗೂಡಿರುವಾಗ ಅವರ ವಾದವು ಆಶ್ಚರ್ಯವನ್ನುಂಟುಮಾಡದೆ ಇರದು ವ್ಯವಸಾಯದಲ್ಲಿ ಬಹಳ ಹಿಂದುಳಿದಿರುವ ಇಂಗ್ಲೆಂಡುದೇಶದಲ್ಲೇ "ಹೊಲಗಳ ಕಡೆಗೆ ಹಿಂದಿರುಗಿ" (back to land) ಎಂಬ ಕೂಗು ಕುಗ್ಗುತ್ತಿರುವಾಗ[15] ವ್ಯವಸಾಯವನ್ನೇ ಮೂಲಜೀವನಾಧಾರವಾಗಿ ಮಾಡಿಕೊಂಡು ವರಮಾನವು ಅತಿ ಕಡಮೆಯಾಗಿ ಮಾಡಿಕೊಂಡಿರುವ ನಮ್ಮ ಜನರಿಗೆ ಈ ರೀತಿ ಬೋಧಿಸುವುದನ್ನು ನೋಡಿದರೆ ಯಾರಿಗೆ ತಾನೆ ವಿಸ್ಮಯವಾಗುವುದಿಲ್ಲ?

ಕೈಗಾರಿಕೆಯು ಬೆಳೆದರೆ ಅನೇಕಾನೇಕ ಅನಿಷ್ಟಗಳು ಪ್ರಾಪ್ತವಾಗುವುವೆಂದು ನಮ್ಮಲ್ಲಿ ಕೆಲವರು ಅಂಜುವರು ಇಂಗ್ಲೆಂಡು ಮುಂತಾದ ದೇಶಗಳಲ್ಲಿ ಕೈಗಾರಿಕೆಯ ಬೆಳವಣಿಗೆಯಿಂದ ಪ್ರಾರಂಭದಲ್ಲಿ ಪಟ್ಟಣಜೀವನದ ಕಷ್ಟಕಾರ್ಪಣ್ಯಗಳು ಸಹಿಸಲದಳವಾದ ರೀತಿಯಲ್ಲಿ ಕೂಲಗಾರರನ್ನು ಹಿಂಸಿಸಿದುವು, ವಿಧವಿಧವಾದ ಸಮಾಜದ ರೋಗರುಜಿನಗಳು ಜನರನ್ನು ಕಾಡಿದುವು ಇದರಿಂದ ಉಂಟಾದ ಭೀಕರ ಅನುಭವವು ಜನರಲ್ಲಿ ಜುಗುಪ್ಸೆಯನ್ನುಂಟುಮಾಡಿ ಕೈಗಾರಿಕೆಗಳನ್ನೇ ವರ್ಜಿಸಿ ಗ್ರಾಮಾಂತರದ ಸರಳ ಜೀವನವೇ ಲೇಸೆನ್ನುವಂತೆ ಮಾಡಿತು ಆದರೆ ಆರಂಭದಲ್ಲಿದ್ದ ಪರಿಸ್ಥಿತಿಗೂ, ಈಗಿನಕಾಲದ ನವಯುಗದ ರೀತಿಗೂ ತಾರತಮ್ಯವಿಲ್ಲವೆ? ಈಗ ಇವೆಲ್ಲವೂ

---

14 Planned Economy, p. 204

15 ,, ,, p 205

ಕೆಲವೆಡೆಗಳಲ್ಲಿ ಉತ್ತಮಗೊಂಡಿವೆ, ಇನ್ನು ಕೆಲವೆಡೆಗಳಲ್ಲಿ ಪುನರ್ರಚಿತವಾಗಿವೆ ಬದಲಾಯಿಸಲು ಅಸಾಧ್ಯವಾದ ಹಳೆಯ ಕಾರ್ಖಾನೆಗಳನ್ನು ಉತ್ತಮಗೊಳಿಸಿದ್ದಾರೆ, ಹೊಸದಾಗಿ ಸ್ಥಾಪಿಸಿದುವುಗಳನ್ನೆಲ್ಲಾ ನವೀನರೀತಿಯಲ್ಲಿ ವ್ಯವಸ್ಥೆಗೊಳಿಸಿದ್ದಾರೆ ಇದರಿಂದ ಕೆಲಸಗಾರರು ಬಯಸಬಹುದಾದ ಆರ್ಥಿಕ, ಸಾಮಾಜಿಕ ಮತ್ತು ನೈತಿಕಧ್ಯೇಯಗಳನ್ನು ಬಹು ಸಮರ್ಪಕವಾಗಿ ಸಾಧಿಸಲಾಗಿದೆ

ಮತ್ತೆ ಕೆಲವರು ಯಂತ್ರೋಪಯೋಗದ ತತ್ತ್ವವನ್ನೇ ಪ್ರತಿಭಟಿಸುವರು ಅವರ ದೃಷ್ಟಿಯಲ್ಲಿ ಅದು ಸರಳಜೀವನಕ್ಕೆ ಕುಂದುಕ ತಂದೊಡ್ಡುವುದು ಹೀಗೆ ಹೇಳುವರು ಪ್ರಾಯಶಃ ಬಡತನಕ್ಕೂ ಸರಳಜೀವನಕ್ಕೂ ವ್ಯತ್ಯಾಸವನ್ನರಿಯದೆ ಇರುವ ಸಂಕುಚಿತಮನೋಭಾವವನ್ನು ಪ್ರಕಾಶಪಡಿಸುವರು. ಇದು ಜನರ ಮನಸ್ಸನ್ನು ಅಭ್ಯುದಯಮಾರ್ಗದಿಂದ ಅಧಃಪತನ ಮಾರ್ಗಕ್ಕೆ ಎಳೆಯುವ ವಿಧಾನ ಕಾಲದ ಮಹಿಮೆಯನ್ನೂ ಸುತ್ತಮುತ್ತಲಿನ ವಾತಾವರಣವನ್ನೂ ಅರಿಯದೆ ಆಡುವ ಈ ಮಾತುಗಳಿಗೆ ಕಿವಿಗೊಡದಿರುವುದು ಅತ್ಯಗತ್ಯ

ಅವರೆ ಪೂಜ್ಯರಾದ ಮಹಾತ್ಮಾ ಗಾಂಧಿಯವರು ಸಹ ಯಂತ್ರೋಪಕರಣಗಳ ಉಪಯೋಗದ ವಿರೋಧಿಗಳೆಂಬ ತಪ್ಪು ಅಭಿಪ್ರಾಯವನ್ನು ಕೆಲವರು ಹರಡುತ್ತಿರುವರು ಗಾಂಧೀಜೀಯವರ ಬರವಣಿಗೆಗಳಲ್ಲಿ ಯಂತ್ರದ ಉಪಯೋಗಕ್ಕೆ ನಿರ್ದಿಷ್ಟ ಒಪ್ಪಿಗೆಯ ಆಧಾರಗಳು ಹೇರಳವಾಗಿ ದೊರಕುವುವು "ನೀವು ಎಲ್ಲಾ ಯಂತ್ರಗಳನ್ನೂ ವಿರೋಧಿಸುವಿರಾ" ಎಂಬ ಪ್ರಶ್ನೆಗೆ ಉತ್ತರವಾಗಿ, "ಅದು ಹೇಗೆ ಸಾಧ್ಯ ನೂಲುವ ಚರಕವೇ ಒಂದು ಯಂತ್ರ. ನಾನು ವಿರೋಧಿಸುವುದು ಯಂತ್ರಗಳ

ಹುಚ್ಚನ್ನು, ಯಂತ್ರಗಳನ್ನಲ್ಲ" ಎಂದು ಅವರು ಹೇಳಿರುವರು [16] "ಎಲ್ಲರ ಹಿತವನ್ನೂ ಬಯಸಿ ಸೇವೆ ಸಲ್ಲಿಸತಕ್ಕ ಯಂತ್ರಗಳ ಉಪಯೋಗವು ನ್ಯಾಯವಾದದ್ದು" ಎಂಬದಾಗಿ ಮತ್ತೊಂದು ಕಡೆ ಹೇಳಿರುವರು [17] ಸೇವಾಭಾವನೆಯಿಂದ ಜನರ ಹಿತದಲ್ಲಿ ಸಹಾಯಮಾಡತಕ್ಕ ಯಂತ್ರಗಳು, ಹಡಗುಗಳು, ರೈಲುಗಳು, ಕಬ್ಬಿಣದ ಕಾರ್ಖಾನೆಗಳು, ವಿದ್ಯುಚ್ಛಕ್ತಿಯ ಕಾರ್ಯಾಲಯಗಳು, ಯಂತ್ರಗಳನ್ನು ತಯಾರಿಸುವ ಕಾರ್ಖಾನೆಗಳು ಎಲ್ಲವೂ ಅವರಿಗೆ ಬೇಕು [18] ಅವುಗಳೆಲ್ಲವೂ ಗ್ರಾಮಕೈಗಾರಿಕಗಳ ಏಳಿಗೆಗೆ ಸಹಾಯಮಾಡಬೇಕು ಆದರೆ ಒಂದು ಅಂತಸ್ತಿನವರು ಮತ್ತೊಂದು ಅಂತಸ್ತಿನವರನ್ನು ಶೋಷಣೆಗೆ ಗುರಿಮಾಡುವ ರೀತಿಯಾಗಲಿ ಅಥವಾ ಮಾನವೀಗುಣಗಳನ್ನು ನಾಶಮಾಡತಕ್ಕ ಯಂತ್ರಸಾಧನಗಳಾಗಲಿ ರಚನಾಕ್ರಮಗಳಾಗಲಿ ಅವರಿಗೆ ಸರಿಹೋಗವು ಇದುವರೆಗ ನಡೆದಿರುವ ಕೈಗಾರಿಕೆಯ ಅಭಿವೃದ್ಧಿಯಿಂದ ಗ್ರಾಮಕೈಗಾರಿಕೆಗಳು ಕ್ಷೀಣಸ್ಥಿತಿಗೆ ಬರುತ್ತಿದ್ದುವು ಇನ್ನುಮುಂದೆ ಕೈಗಾರಿಕೆ ಯೋಜನೆಯಲ್ಲಿ ದೊಡ್ಡದಾಗಿ ಕಾರ್ಖಾನೆಗಳಲ್ಲಿ ನಡೆಯುವ ಕೈಗಾರಿಕಗಳೂ, ಗ್ರಾಮಕೈಗಾರಿಕೆಗಳೂ ಪರಸ್ಪರ ಬೆಂಬಲದಿಂದ ದೇಶದ ಆರ್ಥಿಕ ಪ್ರಗತಿಯನ್ನು ಸಾಧಿಸಬೇಕೆನ್ನುವುದೇ ಅವರ ಮತ

ಯಂತ್ರೋಪಕರಣಗಳು ಮಾನವನ ಶ್ರಮವನ್ನು ಬಹಳ ಮಟ್ಟಿಗೆ ಇಳಿಸಿರುವುದೂ ಅಲ್ಲದೆ ಮಾನವನ ಭೋಗಕ್ಕೆ ಹೆಚ್ಚು ಸಂಪತ್ತನ್ನು ಒದಗಿಸಿವೆ ಮನುಷ್ಯನ ಕ್ರಿಯಾಶಕ್ತಿಯು ಯಂತ್ರಗಳ ಸಹಾಯದಿಂದ ಅಧಿಕವಾಗುವುದು. ಕೈಗಾರಿಕೆ,

---

[16] Young India 13th Nov 1924.

[17] Young India 15th April 1926.

[18] Harijan 27th Jan 1940.

ವ್ಯವಸಾಯ ಮತ್ತು ಯಾನವಾಹನಗಳು—ಇವು ಯಂತ್ರಗಳ ಸಹಾಯದಿಂದ ಅಭಿವೃದ್ಧಿಯಾಗಿರುವ ದೇಶಗಳಲ್ಲೆಲ್ಲಾ ಜನರ ಆರ್ಥಿಕಬಲವು ಹೆಚ್ಚಿರುತ್ತದೆ ಮಾನವನು ತನ್ನ ಸಮಯವನ್ನು ಅರ್ಥಾರ್ಜನೆಯೊಂದೇ ಅಲ್ಲದೆ ಇತರ ಹವ್ಯಾಸಗಳಿಗೂ ಉಪಯೋಗಿಸುವಂತಾಗಿರುವುದು ಯಂತ್ರದ ಸಹಾಯದಿಂದ. ಇದನ್ನು ಅರಿತೇ ಅಮೆರಿಕಾದ ಸಂಯುಕ್ತಸಂಸ್ಥಾನದ ಪ್ರಸಿದ್ಧ ಕೈಗಾರಿಕೆಯ ವ್ಯವಸ್ಥಾಪಕರಾದ ಹೆನ್ರಿ ಫೋರ್ಡ್ ಅವರು "ಯಂತ್ರಸಹಾಯವಿಲ್ಲದ ಜೀವಿಸುವ ಮಾನವನೇ ಈಗಿನ ಪ್ರಪಂಚದಲ್ಲಿ ಉಳಿದಿರತಕ್ಕ ಗುಲಾಮು" ಎಂದು ಹೇಳಿರುವುದು [19]

ಕೈಗಾರಿಕೆಯ ಬೆಳವಣಿಗೆಗೆ ದೊಡ್ಡ ದೊಡ್ಡ ನಗರಗಳಲ್ಲಿ ಅಖಂಡ ಬಂಡವಾಳ ಬಲದಿಂದ ಅಗಾಧವಾದ ಗಿರಣಿಗಳನ್ನು ಸ್ಥಾಪಿಸಿ ಪೂರ್ವಕಾಲದ ಬಂಡವಾಳ ಪದ್ಧತಿಯಂತೆ ಶ್ರಮಜೀವಿಗಳನ್ನು ಶೋಷಣೆಗೆ ಗುರಿಮಾಡುವುದೊಂದೇ ಮಾರ್ಗವಲ್ಲ. ರಚನಾಕ್ರಮದಲ್ಲಿ ಸೂಕ್ತವಾದ ಬದಲಾವಣೆಗಳನ್ನೇರ್ಪಡಿಸಿ ದೇಶದ ಬಹುಮಂದಿಗೆ ಹಿತವಾಗುವ ರೀತಿಯಲ್ಲಿ ಕಾರ್ಯಕ್ರಮ ನಡೆಸಲು ಸಾಧ್ಯ ಜನರನ್ನು ಒಂದು ದೊಡ್ಡ ಪಟ್ಟಣಕ್ಕೆ ಆಕರ್ಷಿಸುವ ಬದಲು, ಜನರಿರುವ ಸ್ಥಳಗಳಲ್ಲೇ ಕೈಗಾರಿಕೆಗಳನ್ನು ಸ್ಥಾಪಿಸಲು ಈಗಿನ ಕಾಲದಲ್ಲಿ ಹೆಚ್ಚು ಅನುಕೂಲಗಳಿರುವುವು ದೇಶದಲ್ಲೆಲ್ಲಾ ಕೈಗಾರಿಕೆಗಳನ್ನು ಹರಡಬಹುದು. ಬಂಡವಾಳ ಪ್ರಭುತ್ವವನ್ನು ತಪ್ಪಿಸಿ ಸಾರ್ವಜನಿಕಪ್ರಭುತ್ವವನ್ನು ಏರ್ಪಡಿಸಬಹುದು ಜನಗಳ ಸ್ಥಿತಿಗತಿಗಳಿಗನುಕೂಲಿಸುವಂತೆ ಕಾರ್ಖಾನೆಯ ಕೈಗಾರಿಕೆಗಳನ್ನೂ ಸುವ್ಯವಸ್ಥಿತವಾದ ಸುಧಾರಿಸಿದ ಗ್ರಾಮಕೈಗಾರಿಕೆಗಳಿಗೆ ನೆರವಾಗುವಂತೆ ರಚಿಸುವುದು

---

[19] Planned Economy P 214

ಕಷ್ಟವಲ್ಲ. ಇವೆಲ್ಲವನ್ನೂ ಇತರ ದೇಶಗಳಲ್ಲಿ ಸಾಧಿಸಿದ್ದಾರೆ. ಎಲ್ಲಕ್ಕೂ ಬೇಕಾಗಿರುವುದು ಒಂದು ರಚನಾಕ್ರಮದ ಯೋಜನೆ, ಮತ್ತು ಆ ಯೋಜನೆಯನ್ನು ಕಾರ್ಯರೂಪಕ್ಕೆ ತಂದು ಸಾಧಿಸಲು ತಕ್ಕ ದೃಢಸಂಕಲ್ಪಪ್ರೇರಿತವಾದ ಅಧಿಕಾರಬಲ

ಅರ್ಥೋತ್ಪತ್ತಿಯ ವೃದ್ಧಿಯು ಒಂದೇ ವಿಧದ ಕಾರ್ಯದಿಂದಲೇ ಸಾಧ್ಯವಿಲ್ಲ ಕೃಗಾರಿಕೆಯು ಜೀವಣಿಗೆಯ ಜೊತೆಗೆ ವ್ಯವಸಾಯವನ್ನೂ ಆಧುನಿಕ ರೀತಿಯಲ್ಲಿ ಉತ್ತಮಗೊಳಿಸಬೇಕು ದೇಶದ ಜನರಿಗೆಲ್ಲಾ ಸಾಕಾದಷ್ಟು ಪುಷ್ಟಿಕರವಾದ ಸಮಕಟ್ಟಾದ ಆಹಾರವನ್ನೊದಗಿಸಲು, ಈಗ ಬೇಸಾಯವನ್ನು ಅವಲಂಬಿಸಿರುವವರಲ್ಲಿ ಮುಕ್ಕಾಲುಪಾಲು ಮಂದಿ ಮಾತ್ರ ಆಧುನಿಕರೀತಿಯಲ್ಲಿ ಕೆಲಸಮಾಡಿದರೆ ಸಾಕೆಂದು ಲೆಕ್ಕಾಚಾರಮಾಡಿದ್ದಾರೆ ಉಳಿದ ಜನರು ಕೈಗಾರಿಕೆ ಮತ್ತು ಇತರ ವೃತ್ತಿಗಳಿಗೆ ಒದಗುವರು ಈ ರೀತಿ ಕಸಬುಗಳ ಹಂಚಿಕೆಯ ಸಾಧನೆಗೆ ಪ್ರಜೆಗಳೂ ಸರ್ಕಾರವೂ ಒಂದು ನಿರ್ದಿಷ್ಟ ಕಾರ್ಯಕ್ರಮವನ್ನನುಸರಿಸುವುದು ಅತ್ಯಾವಶ್ಯಕ

ಈಚೆಗೆ ಭರತಖಂಡದ ರಾಜಕೀಯ ಸುಧಾರಣೆಗಳ ಅಂಗವಾಗಿ ಸ್ಥಾಪಿತವಾದ ಪ್ರಾಂತೀಯ ಸರ್ಕಾರಗಳಿಗೆ ಬಹುಮಟ್ಟಿನ ಸ್ವಾತಂತ್ರ್ಯ ದೊರಕಿರುದರ ಫಲವಾಗಿ, ಹಲವು ಪ್ರಾಂತೀಯ ಮತ್ತು ದೇಶೀಯ ಸರ್ಕಾರಗಳ ಬೆಂಬಲದಿಂದ ರಾಷ್ಟ್ರೀಯ ಆರ್ಥಿಕ ರಚನಾಸಮಿತಿ ಸ್ಥಾಪಿತವಾಗಿದೆ ಇದರ ಕೆಲಸವು ಜನರಲ್ಲಿ ಉತ್ತೇಜನಕರವಾದ ಆಶೆಯನ್ನು ಮೂಡಿಸಿದೆ ಈ ಸಮಿತಿಯು ನ್ಯಾಷನಲ್ ಕಾಂಗ್ರೆಸ್ ಸರ್ಕಾರಗಳ ಪ್ರೇರಣೆಯಿಂದ ಹುಟ್ಟಿದುದಾದರೂ, ಕೆಲಸದಲ್ಲಿ ಯಾವ ರಾಜಕೀಯ ಸಂಪರ್ಕವೂ ಇಲ್ಲದೆ ಕೇವಲ ಆರ್ಥಿಕದೃಷ್ಟಿಯಿಂದಲೇ ರಾಷ್ಟ್ರಹಿತದಲ್ಲಿ ಕೆಲಸಮಾಡತೊಡಗಿದೆ. ಈ ಸಮಿತಿಯ ಅಧ್ಯಕ್ಷರು

ಪಂಡಿತ ಜವಾಹರ್‌ಲಾಲ್ ನೆಹರು ಅವರು. ಕೈಗಾರಿಕೆ, ವ್ಯಾಪಾರ ಮತ್ತು ಇತರ ಆರ್ಥಿಕ ವ್ಯವಹಾರಗಳಲ್ಲಿ ನುರಿತ ಅನುಭವಶಾಲಿಗಳು ಇದರ ಸದಸ್ಯರುಗಳಾಗಿರುತ್ತಾರೆ ಇದರ ಕೇಂದ್ರ ಸ್ಥಾನವು ಬೊಂಬಾಯಿಪಟ್ಟಣ ಸಮಿತಿಯವರು ಇಪ್ಪತ್ತೊಂಬತ್ತು ಉಪಸಮಿತಿಗಳನ್ನು ನೇಮಿಸಿ ಆ ಉಪಸಮಿತಿಗಳಿಗೆ ಸಂಬಂಧಪಟ್ಟ ವಿಷಯಾನುಸಾರವಾಗಿ ನಿಪುಣರನ್ನು ನೇರಿಸಿಕೊಂಡು ವಿಷಯಪರಿಶೀಲನೆಮಾಡಿ ವರದಿಯನ್ನು ತಯಾರಿಸುತ್ತಿರುವರು

ಆರಂಭದಲ್ಲೇ ಆರ್ಥಿಕ ರಚನಾಸಮಿತಿಯವರು ಪ್ರತಿಯೊಬ್ಬ ಭಾರತೀಯನಿಗೂ ಜೀವನಾಧಾರಕ್ಕೆ ನಾಗರಿಕಪ್ರಮಾಣಗಳಿಗೆ ಅನುಸಾರವಾಗಿ ಕನಿಷ್ಠಪಕ್ಷ ಬೇಕಾಗುವ ವಸ್ತು ಮತ್ತು ಅನುಕೂಲಗಳನ್ನು ನಿಗದಿಮಾಡಿದರು ಇವುಗಳ ಸಾಧನೆಯೇ ಎಲ್ಲಾ ಆರ್ಥಿಕ ರಚನೆಯ ತಳಹದಿ ಅವರ ವ್ಯವಸ್ಥೆಯ ಪ್ರಕಾರ, ಪ್ರತಿ ವ್ಯಕ್ತಿಗೂ—

1 ಸುಮಾರು ಮೂರುಸಾವಿರ ಕ್ಯಾಲೋರಿ ಶಾಖ ಉತ್ಪತ್ತಿ ಮಾಡಲು ಸಾಕಾಗುವಷ್ಟು ಸಮಕಟ್ಟಾದ ಆಹಾರ,

2 ವರ್ಷ ಒಂದಕ್ಕೆ ಮೂವತ್ತು ಚದರ ಗಜ ಬಟ್ಟೆ,

3 ನೂರು ಘನ ಅಡಿಗಳಷ್ಟು ವಾಸಸ್ಥಳ ದೊರಕುವಂತೆ ಗೃಹವಸತಿಗಳು,

4 ಉಚಿತ ವೈದ್ಯಸಹಾಯ,

5 ಹದಿಮೂರು ವರುಷ ವಯಸ್ಸಿನವರೆಗೆ ಉಚಿತ ಶಿಕ್ಷಣ ಇವುಗಳನ್ನು ದೊರಕಿಸಲು ನಮ್ಮ ಉಪಸತ್ತಿಗಳನ್ನು ರೂಢಿಸುವುದೇ ಯೋಜನೆಯ ಉದ್ದೇಶ ಒಂದು ನಿಯಮಿತ ಕಾಲದಲ್ಲಿ ನಮ್ಮ ಇಷ್ಟಾರ್ಥವನ್ನು ಪಡೆಯಬೇಕು ನಾವು ಆಮದು

ಮಾಡುತ್ತಿರುವ ಪರದೇಶದ ಸಾಮಾನುಗಳಲ್ಲಿ ಬಹುಭಾಗವನ್ನು ನಮ್ಮ ದೇಶದಲ್ಲೇ ತಯಾರಿಸಬಹುದೆಂಬ ಅಭಿಪ್ರಾಯವನ್ನು ಸಮಿತಿಯವರೂ ಅನುಮೋದಿಸುವ ಸೂಚನೆಗಳು ಹೊರ ಬೀಳುತ್ತಿವೆ ಈಗ ನಾವು ಹೊರದೇಶದಿಂದ ತರಿಸುತ್ತಿರುವ ಸಾಮಾನುಗಳ ಬೆಲೆಯ ಅಗಾಧ ಪ್ರಮಾಣವನ್ನು ಈ ಕೆಳಗಣ ಪಟ್ಟಿಯು[20] ಸೂಚಿಸುತ್ತದೆ

## 1938-39ರಲ್ಲಿ ಭರತಖಂಡಕ್ಕೆ ಪರದೇಶಗಳಿಂದ ಆಮದಾದ ಸಾಮಾನುಗಳು

(ಒಂದುಕೋಟಿರೂಪಾಯಿಗಳ ಬೆಲೆಗೆ ಕಡಮೆಯಾದುದನ್ನು ಈ ಪಟ್ಟಿಯಲ್ಲಿ ಸೇರಿಸಿಲ್ಲ)

| | ಸಾಮಾನುಗಳು | ಬೆಲೆ ಕೋಟಿರೂ | ಒಟ್ಟು ಆಮದಿನ ಶೇಕಡ ಭಾಗ |
|---|---|---|---|
| 1. | ಹತ್ತಿ ಸಾಮಾನುಗಳು | 22.7 | 14 9 |
| 2. | ಯಂತ್ರಗಳು | 19.0 | 12.5 |
| 3 | ಎಣ್ಣೆ | 15.6 | 10.3 |
| 4. | ಧಾನ್ಯ, ಬೇಳೆ ಮತ್ತು ಹಿಟ್ಟು | 13.7 | 9 0 |
| 5 | ಲೋಹಗಳು ಮತ್ತು ಅದುರು | 10 9 | 7.1 |
| 6 | ವಾಹನಗಳು | 6.7 | 4.4 |
| 7. | ವಿಜ್ಞಾನ ಸಂಶೋಧನ ಸಲಕರಣೆಗಳು | 5.9 | 3.8 |
| 8 | ಕಾಗದ ಮತ್ತು ರಟ್ಟು | 3 2 | 2.1 |
| 9 | ರಂಗಾರೆ ಮತ್ತು ಚಕ್ಕಳ ಹದಮಾಡುವ ಸಾಮಾನುಗಳು | 3.1 | 2 0 |

---

[20] Review of the Trade of India, 1938-39

| | | | |
|---|---|---|---|
| 10. | ರಾಸಾಯನಿಕ ಧೃತಿಗಳು | 3 0 | 2.0 |
| 11. | ಮರ ಮತ್ತು ಮರದ ದಿಮ್ಮಿಗಳು | 2.9 | 1.9 |
| 12. | ತುಪ್ಪಟ ಮತ್ತು ತುಪ್ಪಟದ ಬಟ್ಟೆಗಳು | 2 8 | 1 9 |
| 13. | ಮಸಾಲೆಯ ಸಾಮಾನುಗಳು | 2.6 | 1 7 |
| 14. | ಕಬ್ಬಿಣದ ಸಾಮಾನುಗಳು | 2 6 | 1 7 |
| 15. | ದಿನಚರಿಬೇಕಾಗುವ ವಿವಿಧ ಆಹಾರ ಮತ್ತು ಇತರ ಸಾಮಾನುಗಳು | 2.5 | 1.6 |
| 16. | ಕೃತಕ ರೇಷ್ಮೆ | 2 2 | 1.5 |
| 17. | ಔಷಧಿ ಮುಂತಾದುವು | 2 2 | 1.5 |
| 18. | ಮದ್ಯ | 2.1 | 1.4 |
| 19. | ರೇಷ್ಮೆದಾರ ಮತ್ತು ಬಟ್ಟೆ | 1.9 | 1.3 |
| 20. | ರಬ್ಬರ್ ಸಾಮಾನುಗಳು | 1 4 | 0 9 |
| 21. | ಹಣ್ಣು ಮತ್ತು ತರಕಾರಿ | 1 3 | 0.9 |
| 22. | ಗಾಜಿನಸಾಮಾನು | 1.3 | 0 9 |
| 23. | ಗೊಬ್ಬರ | 1.0 | 0.7 |
| 24 | ಹೊಗಸೊಪ್ಪು | 1.0 | 0.7 |
| | ಒಂದು ಕೋಟಿಗಿಂತ ಕಡಮೆ ಬೆಲೆಯುಳ್ಳ ಇಪ್ಪತ್ತಾರು ಸಾಮಾನುಗಳು | 21.6 | 13.3 |
| | ಒಟ್ಟು | 153.3 | 100. |

ಸರ್ ಎಂ ವಿಶ್ವೇಶ್ವರಯ್ಯನವರು ವಿಚಾರಮಾಡಿ ತಮ್ಮ ಆರ್ಥಿಕ ಪುನರ್ರಚನೆಯ ಹತ್ತು ವರ್ಷದ ಯೋಜನೆಯಲ್ಲಿ ಸಾಧಿಸಬೇಕಾದ ಮತ್ತು ಸಾಧಿಸಬಹುದಾದ ಅಭಿವೃದ್ಧಿಯನ್ನು ಈ ರೀತಿ ಸೂಚಿಸಿರುವರು [21]

---

[21] Planned Economy, p. 94

| | ಬಾಬುಗಳು | ಪ್ರಮಾಣ | ಇಂದ | ಗೆ |
|---|---|---|---|---|
| 1. | ಜನಾಂಗದ ವಾರ್ಷಿಕ ವರಮಾನ | ಕೋಟಿರೂ. | 2,500 | 5,000 |
| 2. | ಕೈಗಾರಿಕೆ ತಯಾರಿಕೆಗಳ ಬೆಲೆ | ,, | 400 | 2,000 |
| 3. | ಮೋಟಾರು ವಾಹನಗಳು | ಸಂಖ್ಯೆ | ಏನೂಇಲ್ಲ | 20,000 |
| 4. | ವ್ಯವಸಾಯದ ಉತ್ಪತ್ತಿ | ಕೋಟಿರೂ. | 2,000 | 2,500 |
| 5 | ಆಬಾದು ಜಮೀನು—ಖುಷ್ಕಿ | ಕೋಟಿಎಕರೆ | 21 2 | 25.0 |
| | —ತರಿ | ,, | 4 9 | 6.0 |
| 6 | ರಸ್ತೆಗಳು | ಸಾವಿರಮೈಲಿ | 253 | 500 |
| 7. | ರೈಲುರಸ್ತೆಗಳು | ,, | 42.75 | 55 |
| 8. | ಕೃಷೀವಲರು (ಕಡಮೆಯಾಗ ಬೇಕಾದುದು) | ಕೋಟಿ | 25 | 20 |
| 9 | ಕಾರ್ಖಾನೆಗಳಲ್ಲಿ ಕೆಲಸಮಾಡುವವರು | ,, | 0 15 | 1 0 |
| 10. | ಎಲ್ಲಾ ತರಹ ಕೈಗಾರಿಕೆಗಳಲ್ಲಿ ಉದ್ಯುಕ್ತರಾದವರು | ,, | 1 5 | 5 0 |
| 11 | ಕೈಗಾರಿಕೆಯ ಅವಲಂಬನೆಯಿಂದ ಜೀವಿಸುವವರು | ,, | 3 5 | 8 5 |
| 12. | ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳು | ಸಾವಿರ | 92 | 200 |
| 13 | ಅಕ್ಷರಸ್ಥರು | ಪ್ರಜಾಸಂಖ್ಯೆಯ ಶೇಕಡ | 8 | 50 |
| 14 | ಶಿಕ್ಷಣಪಡೆಯುತ್ತಿರುವವರು | ,, | 4 67 | 15.0 |

ಮೇಲಿನ ಯೋಜನೆಯು ಕಾರ್ಯಸಾಧನೆಯ ದೃಷ್ಟಿಯಿಂದ ರಚಿತವಾಗಿದೆ ಆದರೂ ಸೂಕ್ತತೋರಿದ ಕಡೆ ಬದಲಾವಣೆಯಾಗಲು ಯಾವ ಅಡ್ಡಿಯೂ ಇರುವುದಿಲ್ಲ ಈ ಪಟ್ಟಿಯನ್ನು ಸರ್ ಎಂ ವಿಶ್ವೇಶ್ವರಯ್ಯನವರು ತಯಾರಿಸಿ ಪ್ರಚುರಪಡಿಸಿದಾಗ ರಾಷ್ಟ್ರೀಯ ಆರ್ಥಿಕ ರಚನಾ ಸಮಿತಿಯು ನಮ್ಮ ದೇಶದಲ್ಲಿ ಸ್ಥಾಪಿತವಾಗುವ ಸೂಚನೆಯಾವುದೂ ಇರಲಿಲ್ಲ ಆದರೆ ಖಾಸಗಿ

ಯಾಗಿಯಾದರೂ ಜನಗಳು ಈ ಕೆಲಸವನ್ನು ಕೈಕೊಳ್ಳುವುದು ಆವಶ್ಯಕವೆಂದು ಆ ಮಹನೀಯರು ತಮ್ಮ ಯೋಜನೆಯನ್ನು ರಚಿಸಿದರು ಜನಗಳು ಜಾಗೃತಿಗೊಂಡು ಒತ್ತಾಯಪಡಿಸಿದರೆ ಯಾವ ಸರಕಾರವೇ ಆಗಲಿ ಸುಮ್ಮನಿರಲಾಗುವುದಿಲ್ಲ ಒಂದು ವೇಳೆ ತತ್ಕಾಲದಲ್ಲಿ ಸರಕಾರದಿಂದ ಯಾವ ಸಹಾಯ ದೊರೆಯದಿದ್ದರೂ, ಜನಗಳಿಗೆ ತಿಳಿವಳಿಕೆಯುಂಟಾಗಿ ನಿರ್ದಿಷ್ಟ ಉದ್ದೇಶವನ್ನು ಸಾಧಿಸಲು ಉತ್ಸಾಹದಿಂದ ಒಟ್ಟುಕೂಡಿ ಪರಸ್ಪರ ಬಲದಿಂದ ನಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದಕ್ಕಾದರೂ ಸಹಾಯವಾದೀತು ಎಂಬುದೇ ಅವರ ಆಶಯ ಅವರು ನಿರೀಕ್ಷಿಸಿದ ಕಾಲಕ್ಕೆ ಮುಂಚೆಯೇ ಕಾರ್ಯಾರಂಭದ ಸೂಚನೆಗಳು ಕಾಣುತ್ತಿರುವುದು ಎಲ್ಲರಿಗೂ ಸಂತೋಷವನ್ನುಂಟುಮಾಡದೆ ಇರದು

---

## ೫. ಅಭಿವೃದ್ಧಿಯ ಕುರುಹುಗಳು

ನಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ವ್ಯವಸಾಯ ಕೈಗಾರಿಕೆಗಳೆರಡನ್ನೂ ಸಮತೂಕದಲ್ಲಿ ಅಭಿವೃದ್ಧಿಗೊಳಿಸುವುದು ಆವಶ್ಯಕವೆಂದು ಹಿಂದೆಯೇ ಹೇಳಿದೆ ಈ ಪ್ರಗತಿ ಸಾಧನೆಗೆ, ಅದರಲ್ಲೂ ಕೈಗಾರಿಕೆಗಳ ಬೆಳವಣಿಗೆಗೆ, ಸಹಾಯ ಸನ್ನಿವೇಶಗಳನ್ನು ವಿಚಾರಮಾಡಿ ಮನದಟ್ಟು ಮಾಡಿಕೊಳ್ಳುವುದು ಆವಶ್ಯಕ ಕಾರ್ಯಾರಂಭಕ್ಕೆ ಮೊದಲೇ ಸಂಶಯದಿಂದ ಗೊಣಗುಟ್ಟುವವರ ಆಕ್ಷೇಪಣೆಗಳಿಗೆ ಸಮಾಧಾನ ತರತಕ್ಕ ವಿಷಯಗಳನ್ನು ವಿವರಿಸುವುದು ಉದ್ದೇಶಸಾಧನೆಯ ತಳಹದಿ.

ನಮ್ಮ ದೇಶದ ಆರ್ಥಿಕ ಪ್ರಗತಿ ಸಾಧನೆಗೆ ಆಶಾದಾಯಕವಾದ ಸೂಚನೆಗಳು ವಿಧವಿಧವಾಗಿ ಕಾಣಬರುತ್ತಿವೆ ನಮ್ಮ ಪರಿಸ್ಥಿತಿಯು ನಿಕೃಷ್ಟವಾದುದಾದರೂ ಇತರ ದೇಶಗಳ ಆರ್ಥಿಕ ಬೆಳವಣಿಗೆಯ ಉದಾಹರಣೆಗಳಿಂದ ಧೈರ್ಯಗೊಳ್ಳಬಹುದು. ಸುಮಾರು ಐವತ್ತು ವರ್ಷಗಳ ಹಿಂದಿನ ಜಪಾನ್ ದೇಶವೂ, ಹಿಂದೆ ನಡೆದ ಮಹಾಯುದ್ಧಕ್ಕೆ ಮುಂಚಿನ ರಷ್ಯಾ ದೇಶವೂ ಇದ್ದ ಸ್ಥಿತಿಗಳನ್ನು ಗಮನಿಸಿದರೆ ನಮ್ಮ ದೇಶದ ಸ್ಥಿತಿಯು ಕೇಡೆಂದು ಹೇಳುವಹಾಗಿಲ್ಲ ನಮ್ಮ ಸ್ಥಿತಿಯು ಶೋಚನೀಯವಾದುದಾದರೂ ಪ್ರಪಂಚದ ಮುಖ್ಯ ಕೈಗಾರಿಕೆಯ ದೇಶಗಳಲ್ಲಿ ಭರತಖಂಡವು ಒಂದೆಂದು ಎಣಿಸಲ್ಪಟ್ಟಿರುವುದು ಗಮನಾರ್ಹವಾದ ವಿಷಯ ನಮ್ಮಲ್ಲಿ ಆರ್ಥಿಕ ಉಪಪತ್ತಿಗಳು ಹೇರಳವಾಗಿವೆ ಪ್ರಕೃತಿಮಾತೆಯ ಉದಾರ ಸಮೃದ್ಧಿಯು ಮಾನವನ ಸೇವೆಗೆ ಕಾದಿದ ಕೈಗಾರಿಕ ಬೆಳೆಯಲು ಬೇಕಾದ ಕಚ್ಚಾ ಸಾಮಾನುಗಳು ನಮ್ಮಲ್ಲೇ ಬಹುಭಾಗ ದೊರೆಯುವುವು ತಯಾರಾದ ಸಾಮಾನುಗಳ ಬಿಕರಿಗೆ ಇತರ ದೇಶಗಳ ಹಾಗೆ ಬೇರೆಕಡೆ ಹೋಗಬೇಕಾಗಿಲ್ಲ ನಮ್ಮ ದೇಶದಲ್ಲೇ ಗಿರಾಕಿಯುಂಟು ನಮ್ಮ ಜನರಲ್ಲಿ ತಲಾ ಒಂದು ಗಜ ಹೆಚ್ಚು ಬಟ್ಟೆಯನ್ನು ಉಪಯೋಗಿಸಿದರ ಸುಮಾರು ನಲವತ್ತು ಕೋಟಿ ಗಜ ತಯಾರಾದ ಬಟ್ಟೆಗೆ ಗಿರಾಕಿ ಒದಗುತ್ತದೆ. ಈ ಅನುಕೂಲ ನಮಗಿರುವಷ್ಟು ಮತ್ತೆ ಯಾವ ದೇಶಕ್ಕೂ ಇರುವುದಿಲ್ಲ.

ಕೈಗಾರಿಕೆಯ ಪ್ರಗತಿಗೆ ಮುಖ್ಯ ಎಡರಾಗಿರುವ ರಾಜಕೀಯ ತೊಂದರೆಗಳು ಪರಿಹಾರವಾಗುವ ಚಿಹ್ನೆಗಳು ಈಗ ಕಾಣಬರುತ್ತಿವೆ ಇದುವರೆಗೆ ದೊರಕಿರುವ ರಾಜಕೀಯ ಸುಧಾರಣೆಗಳಿಂದ ಪ್ರಾಂತೀಯ ಸ್ವಾತಂತ್ರ್ಯವು ಸ್ವಲ್ಪಮಟ್ಟಿ

ಗಾದರೂ ಪ್ರಜಾಪ್ರತಿನಿಧಿಗಳ ಕೈಗೆ ಆಡಳಿತವನ್ನು ವರ್ಗಾಯಿಸಿದೆ. ನಮ್ಮ ರಾಜಕೀಯ ವಣೆಗಳ ಹಿತಕ್ಕಾಗಿ ಕೂಡ ಭರತಖಂಡಕ್ಕೆ ಸ್ವಾತಂತ್ರ್ಯವನ್ನೀಯುವುದು ಆವಶ್ಯಕವಾಗಿ ಕಾಣಬರುತ್ತಿದೆ ಚಕ್ರಾಧಿಪತ್ಯದ ಇತರ ಸ್ವತಂತ್ರ ಸ್ವಾಸ್ಥ್ಯಗಳ ರೀತಿಯಲ್ಲಿಯೇ ಭರತಖಂಡಕ್ಕೂ ಸ್ವಾತಂತ್ರ್ಯವು ದೊರಕುವುದಾಗಿ ಘೋಷಿಸಲ್ಪಟ್ಟಿದೆ ಇವುಗಳ ಜೊತೆಗೆ ಭಾರತೀಯರಲ್ಲಿ ಉಜ್ವಲ ರಾಷ್ಟ್ರೀಯ ಭಾವನ ಹೆಚ್ಚುತ್ತಾ ಸ್ವಾತಂತ್ರ್ಯ ಸಾಧನೆಯ ಪ್ರಯತ್ನಗಳು ಬಹು ಚುರುಕಿನಿಂದ ನಡೆಯುತ್ತಿವೆ. ಈಗಿನ ಯುದ್ಧದಿಂದ ಮತ್ತು ಭರತಖಂಡದ ಅಂತರ್ರಾಷ್ಟ್ರೀಯ ಸ್ಥಾನಮಹಿಮೆಯಿಂದ ನಮ್ಮ ಮುಂದಿನ ರಾಜಕೀಯಸ್ಥಿತಿಯು ಬಹುಜಾಗ್ರತೆ ನಮಗೊಪ್ಪುವ ರೀತಿಯಲ್ಲಿ ಬದಲಾಯಿಸಬಹುದೆಂಬ ಸೂಚನೆಗಳು ಕಾಣಬರುತ್ತಿವೆ

ಮೇಲೆ ಹೇಳಿದ ಹೊರಗಿನ ಸನ್ನಿವೇಶಗಳ ಜೊತೆಗೆ ಜನಾಂಗದ ಒಳಜೀವನದಲ್ಲೂ ಈಗಾಗಲೇ ನಡೆದಿರುವ ಅಭಿವೃದ್ಧಿ ಕಾರ್ಯಗಳು ಮುಂದಿನ ಪ್ರಗತಿಗೆ ಮಾರ್ಗದರ್ಶಕವಾಗಿರುವುವು ಇವುಗಳಲ್ಲಿ ಮುಖ್ಯವಾದ ನಾಲ್ಕನ್ನು ಇಲ್ಲಿ ಪ್ರಸ್ತಾಪಿಸಬಹುದು

ಮೊದಲನೆಯದು, ಭರತಖಂಡದ ಮೂಲಮೂಲೆಗಳಲ್ಲೂ ನಡೆಯುತ್ತಿರುವ ವಿದ್ಯಾಭ್ಯಾಸವು ಜನರನ್ನು ಜಾಗೃತಿಗೊಳಿಸಲು ಅಮೂಲ್ಯವಾದ ಸಾಧನ ಅನಕ್ಷರತೆ ನಮ್ಮ ದೇಶದಲ್ಲಿ ಅಧಿಕವಾಗಿದ್ದರೂ ಈಚೆಗೆ ವಿದ್ಯಾಪ್ರಚಾರಕ್ಕಾಗಿ ಕೈಕೊಂಡಿರತಕ್ಕ ಕೆಲಸಗಳು ಉತ್ತೇಜನಕರವಾಗಿವೆ ಬಲಾತ್ಕಾರದ ಪ್ರಾಥಮಿಕಶಿಕ್ಷಣವು ಅನೇಕ ಕಡೆಗಳಲ್ಲಿ ಜಾರಿಗೆ ಬಂದಿದೆ. ವಯಸ್ಕರ ವಿದ್ಯಾಭ್ಯಾಸ, ಅಕ್ಷರತೆಯ ಪ್ರಚಾರ, ವಿವಿಧ ಶಿಕ್ಷಣಪದ್ಧತಿಯ ಪ್ರಯೋಗಗಳು, ಇವೇ ಮೊದಲಾದುವು

ಜನರಮೇಲೆ ಒಳ್ಳೆಯ ಪರಿಣಾಮವನ್ನುಂಟುಮಾಡಿವೆ ವರ್ಷ ವರ್ಷವೂ ವಿದ್ಯಾರ್ಥಿಗಳ ಸಂಖ್ಯೆ ಏರುತ್ತಿದೆ ಹೈಸ್ಕೂಲು ಕಾಲೇಜುಗಳಲ್ಲಿ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿರುವರು ವಿಶ್ವವಿದ್ಯಾನಿಲಯಗಳ ಸಂಖ್ಯೆಯೂ ಏರುತ್ತಿರುವುದು ಕೆಲವು ದೇಶೀಯ ಸಂಸ್ಥಾನಗಳೂ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿವೆ ಔದ್ಯೋಗಿಕಶಿಕ್ಷಣವು ಕೂಡ ವಿಧವಿಧರೀತಿಯಲ್ಲಿ ಹರಡುತ್ತಿದೆ ಪರದೇಶಗಳಿಗೆ ಭಾರತೀಯ ವಿದ್ಯಾರ್ಥಿಗಳು ವಿದ್ಯಾರ್ಜನಗೆ ಹೋಗಿಬರುವುದು ಸಾಮಾನ್ಯವಾಗುತ್ತಿದೆ ಇವೆಲ್ಲದರ ಜೊತೆಗೆ ಭಾರತೀಯರಿಗೆ ಸರ್ಕಾರಿ ಇಲಾಖೆಗಳಲ್ಲೂ, ವ್ಯಾಪಾರ ಕೈಗಾರಿಕೆಗಳ ಸಂಸ್ಥೆಗಳಲ್ಲೂ ಪ್ರಾಯೋಗಿಕಶಿಕ್ಷಣಪಡೆಯಲು ಹೆಚ್ಚಾಗಿ ಅವಕಾಶ ದೊರೆಯುತ್ತಿದೆ ದೇಶದ ತರುಣ ವಿದ್ಯಾರ್ಥಿಗಳು ತಮ್ಮ ಬುದ್ಧಿಶಕ್ತಿಯನ್ನು ದೇಶದ ಏಳಿಗೆಗೆ ನೆರವಾಗುವಂತೆ ಉಪಯೋಗಿಸಲು ದೊರೆತಿರುವ ಅವಕಾಶವು ಕಾಲಕ್ರಮದಲ್ಲಿ ಪೂರ್ಣ ಫಲವನ್ನೀಯುವುದರಲ್ಲಿ ಯಾವ ಸಂದೇಹವೂ ಇರಲಾರದು

ಎರಡನೆಯದಾಗಿ, ಈಚೆಗೆ ಇಂಡಿಯಾ ಸರ್ಕಾರದವರೂ ಖಾಸಗಿ ಸಂಸ್ಥೆಗಳೂ ನಡೆಸಿರುವ ವಿವಿಧವಿಚಾರಣೆಗಳಿಂದಲೂ ಪರಿಶೋಧನೆಗಳಿಂದಲೂ ನಮ್ಮ ಕೈಗಾರಿಕಗಳ ಪ್ರಗತಿಗೆ ಆವಶ್ಯಕವಾದ ಅನೇಕ ಅಮೂಲ್ಯವಾದ ವಿಷಯಗಳೂ ಸಲಹೆಗಳೂ ಹೊರಬಿದ್ದಿವೆ ಈ ಸಲಹೆಗಳ ಆಧಾರದ ಮೇಲೆ ಕೈಕೊಂಡ ಉದ್ಯಮಗಳೆಲ್ಲವೂ ಯಶಸ್ವಿಯಾಗಿ ನಡೆದು ಕೈಗೂಡಿವೆ

ಮೂರನೆಯದು, ಇದುವರೆಗಿನ ವ್ಯವಸಾಯ ಮತ್ತು ಕೈಗಾರಿಕೆಗಳ ಅಭಿವೃದ್ಧಿ ಎಲ್ಲಾ ಪ್ರಾಂತ್ಯಗಳಲ್ಲೂ ಪ್ರತ್ಯೇಕ ವ್ಯವಸಾಯ ಇಲಾಖೆಗಳು ಏರ್ಪಾಟಾಗಿ ವಿವಿಧ ಕೆಲಸಗಳನ್ನು

ಕೈಕೊಂಡು ರೈತನಿಗೆ ಆಧುನಿಕ ವ್ಯವಸಾಯಮಾರ್ಗಗಳನ್ನು ಕಲಿಸುತ್ತಿರುವುವು ನೀರಾವರಿಕೆಲಸಗಳು ಎಲ್ಲೆಲ್ಲೂ ಬೆಳೆದು ತರಿಯ ವ್ಯವಸಾಯ ಹೆಚ್ಚುತ್ತಿದೆ ಶಾಸ್ತ್ರೀಯವ್ಯವಸಾಯ, ಹಿಡುವಳಿ ಕೂಡಿಸುವುದು, ವ್ಯವಸಾಯ ಬಂಡವಾಳವ್ಯವಸ್ಥೆ, ಬೆಳೆಯನ್ನು ಮಾರಲು ಮಾರಾಟಸಂಘಗಳು, ಉಪಕಸಬುಗಳು, ವ್ಯವಸಾಯ ವಿದ್ಯಾಪ್ರಚಾರ—ಇವೇ ಮುಂತಾದ ಕೆಲಸಗಳು ಬಹು ಚುರುಕಾಗಿ ಮುಂದುವರಿಯುತ್ತಿವೆ ಎಲ್ಲಾ ಸರ್ಕಾರ ಗಳೂ ಗ್ರಾಮಾಭಿವೃದ್ಧಿಕೆಲಸಗಳನ್ನು ಬಹಳ ಸಡಗರದಿಂದ ಕೈಕೊಂಡು ನಡಸುತ್ತಿವೆ ರೈತನ ಹಿತಸಾಧನೆಗಾಗಿ ಅನೇಕ ಕಾನೂನುಗಳು ಜಾರಿಗೆ ಬಂದಿವೆ ಉದಾಹರಣೆಗಾಗಿ, ಗುತ್ತಿಗೆ ದಾರರನ್ನು ಕಾಪಾಡುವ ಕಾನೂನುಗಳು, ಲೇವಾದೇವಿ ನಡ ಸುವವರನ್ನು ಹತೋಟಿಯಲ್ಲಿಡುವ ಕಾನೂನುಗಳು, ರೈತರ ಸಾಲ ಪರಿಹಾರದ ಕಾನೂನುಗಳು, ಜಮೀನುಪರಭಾರೆಯಾಗ ದಂತೆ ತಡೆಯುವ ಕಾನೂನುಗಳು, ವ್ಯವಸಾಯಗಾರರ ಹಿತ ರಕ್ಷಣೆಯ ಕಾನೂನುಗಳು—ಇವನ್ನು ನಮೂದಿಸಬಹುದು. ಎಲ್ಲವೂ ರೈತನ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಕೈಗೊಂ ಡವು ಈಗ ನಡಯುತ್ತಿರುವ ಕೆಲಸಗಳನ್ನು ವಿಚಾರಮಾಡಿ ದರ, ಎರಡು ತರಹ ಕೆಲಸಗಳೂ ಜೊತೆಜೊತೆಯಲ್ಲಿ ನಡೆಯು ತ್ತಿರುವುದು ಗೋಚರವಾಗುತ್ತದೆ. ವ್ಯವಸಾಯಗಾರರಿಗೆ ಸದ್ಯ ದಲ್ಲಿ ಇರತಕ್ಕ ಎಡರುಗಳನ್ನು ಪರಿಹರಿಸತಕ್ಕವುಗಳು. ಅಭಿ ವೃದ್ಧಿ ಕೆಲಸಗಳಿಗೆ ಉತ್ತೇಜನ ಕೊಡತಕ್ಕವುಗಳು ಒಂದೇ ಮಾತಿನಲ್ಲಿ ಹೇಳುವುದಾದರೆ, ನಮ್ಮ ದೇಶದ ಆರ್ಥಿಕಪ್ರಗತಿಗೆ ರೈತನ ಏಳಿಗೆಯೇ ಮೂಲಾಧಾರವೆಂಬುದು ಎಲ್ಲರ ಮನಸ್ಸಿ ನಲ್ಲಿಯೂ ದೃಢವಾಗಿ ಬೇರೂರಿ ಯಾವ ಹೊಸ ಕೆಲಸವನ್ನು ಕೈಗೊಂಡರೂ ಅವನ ಹಿತವನ್ನು ನೆನೆಯುವುದು ಸರ್ಕಾ

ರದ ಪರಮೋದ್ದೇಶವಾಗಿದೆ. ಸರ್ಕಾರದ ದೃಷ್ಟಿ ಪಟ್ಟಣಗಳ ಕಡೆಯಿಂದ ಗ್ರಾಮಾಂತರಗಳ ಕಡೆ ತಿರುಗಿದೆ. ಇಷ್ಟಾದರೂ ಮಾಡಬೇಕಾದ ಕೆಲಸ ಬೆಟ್ಟದಹಾಗೆ ಕೂತಿರುವುದು, ಇದು ನಮ್ಮ ಆರ್ಥಿಕ ಸಮಸ್ಯೆಯ ಅಗಾಧತೆಯನ್ನು ಸೂಚಿಸುತ್ತದೆ.

ಕೈಗಾರಿಕೆಯ ಅಭಿವೃದ್ಧಿಯಲ್ಲಿ ನಾವು ಗಮನಿಸಬೇಕಾದುದು—ಗ್ರಾಮಕೈಗಾರಿಕೆಗಳು ಮತ್ತು ಕಾರ್ಖಾನೆಗಳಲ್ಲಿ ನಡೆಯುವ ಕೈಗಾರಿಕೆಗಳು. ಗ್ರಾಮಕೈಗಾರಿಕೆಗಳ ಕಡೆ ಹೆಚ್ಚು ಗಮನ ಬೀಳುತ್ತಿದೆ. ರಾಟೆನೂಲುವುದು, ಕೈಮಗ್ಗದ ನೆಯ್ಗೆ, ಕುಂಬಾರರ ಕೆಲಸಗಳು, ವಿವಿಧ ಲೋಹದ ಸಾಮಾನುಗಳು, ಚಾಪೆ ಹೆಣೆಯುವುದು, ಹಗ್ಗ, ಕಾಗದ, ಆಟದ ಸಾಮಾನು, ಗುಂಡಿ, ಬಳೆ, ಬೊಂಬೆ ಇವುಗಳ ತಯಾರಿಕೆ—ಎಲ್ಲವೂ ಜೀರ್ಣೋದ್ಧಾರವಾಗುತ್ತಿವೆ. ಅಖಿಲ ಭಾರತ ಚರಕ ಸಂಘ, ಅಖಿಲ ಭಾರತ ಗ್ರಾಮಕೈಗಾರಿಕೆಯ ಸಂಘ, ಗಾಂಧೀಸೇವಾ ಸಂಘ, ಖಾದಿಪ್ರತಿಷ್ಠಾನ ಮುಂತಾದ ಖಾಸಗೀ ಸಂಸ್ಥೆಗಳೂ, ಬೇರೆ ಬೇರೆ ಸರ್ಕಾರಗಳ ಕೈಗಾರಿಕೆಯ ಇಲಾಖೆಗಳೂ ನಶಿಸಿ ಹೋಗುತ್ತಿರುವ ಗ್ರಾಮಕೈಗಾರಿಕೆಗಳೆಲ್ಲವನ್ನೂ ಆಧುನಿಕ ರೀತಿಯಲ್ಲಿ ಉದ್ಧಾರಮಾಡಲು ಪ್ರಯತ್ನ ಮಾಡುತ್ತಿರುವುವು.

ಇನ್ನು ಕಾರ್ಖಾನೆಗಳಲ್ಲಿ ನಡೆಯತಕ್ಕ ದೊಡ್ಡ ಕೈಗಾರಿಕೆಗಳ ಮಾತು. ಇವು ನಮ್ಮ ದೇಶದಲ್ಲಿ ಬೆಳೆದಿರುವ ರೀತಿನೀತಿಗಳನ್ನು ಸ್ವಲ್ಪ ವಿಶದವಾಗಿ ತಿಳಿಯುವುದು ಆವಶ್ಯಕ. ಈ ತರಹ ರಚನೆಯ ಕೈಗಾರಿಕೆ ನಮ್ಮ ದೇಶದಲ್ಲಿ ಸುಮಾರು ತೊಂಬತ್ತು ವರ್ಷಗಳ ಹಿಂದೆಯೇ ಆರಂಭವಾದರೂ ಅತಿ ನಿರಾಶೆಯನ್ನುಂಟುಮಾಡುವಷ್ಟು ಸಾವಧಾನವಾಗಿ ಬೆಳೆದಿದೆ. ಇದಕ್ಕೆ ನಮ್ಮ ರಾಜಕೀಯ ಪರಾಧೀನತೆಯೇ ಮುಖ್ಯಕಾರಣ. ಕೈಗಾರಿಕೆಯ

ಬೆಳವಣಿಗೆಗೆ ಇನ್ನೂ ಕಾಲ ಒದಗಿಲ್ಲ ಅಥವಾ ಸಾಮರ್ಥ್ಯವಿಲ್ಲ ವೆಂದು ಎಂದಿಗೂ ತಿಳಿಯಲಾಗದು ಇಂಡಿಯಾ ಸರಕಾರದವರು ರೈಲುಗಳನ್ನು ದೇಶದಲ್ಲಿ ಹಾಕಿಸಲು ತೋರಿಸಿದ ಶ್ರದ್ಧೆಯನ್ನೇ ಇತರ ವಿಧವಾದ ಕೈಗಾರಿಕೆಗಳ ಅಭಿವೃದ್ಧಿಯಲ್ಲಿಯೂ ತೋರಿ ಸಿದ್ದರೆ ನಮ್ಮ ದೇಶದ ಸ್ಥಿತಿಯೇ ಬದಲಾಯಿಸುತ್ತಿತ್ತು

ಹೀಗಿದ್ದರೂ, ಖಾಸಗಿಯಾಗಿ ಏರ್ಪಟ್ಟಿರುವ ನಾಲ್ಕಾರು ಕೈಗಾರಿಕೆಗಳ ಬೆಳವಣಿಗೆ ಆಶಾದಾಯಕವಾಗಿದೆ ಖಾಸಗಿ ಕೈಗಾರಿಕೆಗಳಲ್ಲಿ ಎರಡು ವಿಧ ಪರದೇಶೀಯರು ಸುಂಕದ ಭಾರವನ್ನು ತಪ್ಪಿಸಿಕೊಳ್ಳಲು ತಮ್ಮ ಬಂಡವಾಳದಿಂದ ತಮ್ಮ ಮೇಲ್ವಿಚಾರಣೆಯಲ್ಲಿ ನಮ್ಮ ದೇಶದಲ್ಲಿ ಸ್ಥಾಪಿಸಿರುವ ಕೈಗಾರಿಕ ಗಳು ಕೆಲವು ಇವುಗಳಲ್ಲಿ ಮುಖ್ಯವಾದುವು—ದೀಪದಕಡ್ಡಿ, ರಬ್ಬರ್ ಟೈರ್, ಜೋಡುಗಳು, ಸಾಬೂನು, ರಸಾಯನ ಶಾಸ್ತ್ರಕ್ಕೆ ಸಂಬಂಧಪಟ್ಟ ಸಾಮಾನುಗಳು, ಸಿಗರೇಟುಗಳು— ಇವುಗಳ ತಯಾರಿಕೆ. ಇವುಗಳೆಲ್ಲವೂ ಹಿಂದಿನ ಯುದ್ಧದಿಂದೀ ಚೆಗೆ ಹೆಚ್ಚಾಗಿ ಬೆಳೆದಿವೆ ಈ ಉದ್ಯಮಗಳು ಅಗಾಧ ಉಪ ಪತ್ತಿಗಳ ಸಹಾಯದಿಂದ ದೊಡ್ಡ ಪ್ರಮಾಣದಲ್ಲಿ ಕೆಲಸಮಾಡು ತ್ತಿವೆ ಇವನ್ನು ಸ್ವದೇಶೀ ಉದ್ಯಮಗಳೆನ್ನಲಾಗದು ಬಂಡ ವಾಳ, ಆಡಳಿತ, ಹತೋಟಿ, ಮೇಲ್ವಿಚಾರಣೆ ಎಲ್ಲವೂ ಪರ ದೇಶೀಯರದು. ಗುಮಾಸ್ತರುಗಳು, ಮೇಸ್ತ್ರಿಗಳು ಮತ್ತು ಕೂಲಿಗಳು ಮಾತ್ರ ನಮ್ಮವರು ಇದರಿಂದ ನಾವು ತಿಳಿಯ ಬೇಕಾದ ಮುಖ್ಯ ವಿಷಯವೆಂದರೆ—ಈಗಿನ ತರಹ ಕಾರ್ಖಾ ನೆಗಳಲ್ಲಿ ನಡೆಯುವ ಕೈಗಾರಿಕೆಗಳನ್ನು ನಾವು ಕೈಕೊಂಡು ನಡ ಸದಿದ್ದರೆ ಪರದೇಶೀಯರು ನಮ್ಮ ದೇಶವನ್ನು ಯಾವ ರೀತಿ ಆಕ್ರಮಿಸುವರೆಂಬುದು ನಾವು ಎಚ್ಚರಗೊಂಡು ಕಾರ್ಯತತ್ಪರ ರಾಗಲು ಇದಕ್ಕಿಂತ ಬೇರೆ ಪ್ರೇರಣೆ ಬೇಕೆ ?

ಪರದೇಶೀಯರು ಈ ರೀತಿ ಅಭಿವೃದ್ಧಿ ಪಡಿಸಿರುವ ಕೈಗಾರಿಕೆಗಳು ನಮ್ಮ ದೇಶದಲ್ಲಿ ಏನು ಸಾಧ್ಯ ಎನ್ನುವುದನ್ನು ವಿಶದಪಡಿಸಿವೆ ಅದರ ಜೊತೆಗೆ ಎರಡನೆಯ ವಿಧದ, ಎಂದರೆ ನಮ್ಮವರೇ ಏರ್ಪಡಿಸಿ ನಡೆಸುತ್ತಿರುವ ಕೈಗಾರಿಕೆ ಉದ್ಯಮಗಳ, ಅನುಭವವೂ ಮತ್ತಷ್ಟು ಉತ್ತೇಜನ ಕೊಡತಕ್ಕುವುಗಳಾಗಿವೆ ಹತ್ತಿಗಿರಣಿಗಳು ನಮ್ಮ ದೇಶದಲ್ಲಿ 1851 ರಿಂದ ಬಹಳ ಫಲಕಾರಿಯಾಗಿ ಕೆಲಸ ನಡೆಸುತ್ತಿವೆ ಒಟ್ಟು 423 ಗಿರಣಿಗಳು ಈಗ ದೇಶದ ವಿವಿಧ ಭಾಗಗಳಲ್ಲಿ ಚೆನ್ನಾಗಿ ಕೆಲಸಮಾಡುತ್ತಿವೆ. ಆದರೂ ನಾವು ಪರದೇಶಗಳಿಂದ ಸುಮಾರು ಇಪ್ಪತ್ತು ಮೂರು ಕೋಟಿ ರೂಪಾಯಿನ ಬಟ್ಟೆಯನ್ನು ಪ್ರತಿವರ್ಷವೂ ಆಮದುಮಾಡುತ್ತಿರುವೆವು ಸ್ವದೇಶೀ ಕೈಗಾರಿಕೆಗಳಿಗೆ ಈ ದಾರಿಯೊಂದರಲ್ಲೇ ಎಷ್ಟರ ಮಟ್ಟಿಗೆ ಅವಕಾಶವಿದೆ ಎನ್ನುವುದು ವಿದಿತವಾಗುವುದು.

ಕಬ್ಬಿಣ ಮತ್ತು ಉಕ್ಕಿನ ತಯಾರಿಕೆಯು ನಮ್ಮ ದೇಶದಲ್ಲಿ 1874ನೆಯ ಇಸವಿಯಲ್ಲಿ ಆರಂಭವಾಯಿತು ನಮ್ಮ ಬಳಕೆಗೆ ಬೇಕಾದ ಸಾಮಾನ್ಯವಾದ ಸಾಮಾನುಗಳನ್ನು ತಯಾರಿಸಲು ಈಗ ಒಟ್ಟು 13 ಕಾರ್ಖಾನೆಗಳು ಕೆಲಸಮಾಡುತ್ತಿವೆ ಇವುಗಳಲ್ಲೆಲ್ಲಾ ಅತಿಮುಖ್ಯವಾದುದೆಂದರೆ 1905ರಲ್ಲಿ ಜಂಷೆಡ್‌ಪುರದಲ್ಲಿ ಸ್ಥಾಪಿತವಾದ ತಾತಾ ಕಾರ್ಖಾನೆ ಇದು ಬ್ರಿಟಿಷ್ ಚಕ್ರಾಧಿಪತ್ಯದಲ್ಲೆಲ್ಲಾ ಅತ್ಯಂತ ದೊಡ್ಡ ಕಾರ್ಖಾನೆ ನಮ್ಮ ದೇಶದಲ್ಲಿ ಉಪಯೋಗಕ್ಕೆ ಬೇಕಾಗುವ ಸಾಮಾನುಗಳ ಒಟ್ಟಿನ 4/5 ಭಾಗವನ್ನು ಈ ಕಾರ್ಖಾನೆ ತಯಾರಿಸುತ್ತಿರುವುದು ಇದರ ಆಶ್ರಯದಲ್ಲೇ ಅನೇಕ ಉಪಸಂಸ್ಥೆಗಳು ಹುಟ್ಟಿ ಕೆಲಸಮಾಡುತ್ತಿವೆ ಇದು ಶುದ್ಧ ಸ್ವದೇಶೀ ಪ್ರಯತ್ನದ ಫಲ ಇಷ್ಟು ಫಲಕಾರಿಯಾಗಿರುವುದಕ್ಕೆ ಕಳೆದ ಮಹಾಯುದ್ಧದಿಂದ ಉಂಟಾದ ಅನುಕೂಲಸ್ಥಿತಿಯೂ ಮತ್ತು ಸರ್ಕಾರದವರು ಕೊಟ್ಟ ಪೋಷ

ಣೆಯೂ ಕಾರಣಗಳು ಸ್ವದೇಶೀ ಪ್ರಯತ್ನಗಳು ಯಶಸ್ವಿಯಾಗಿ ಕೆಲಸಮಾಡಬಲ್ಲವೆನ್ನುವುದಕ್ಕೆ ಇದಕ್ಕಿಂತ ನಿದರ್ಶನಬೇಕಾಗಿಲ್ಲ

ಇದೇ ರೀತಿಯಲ್ಲಿ ಸಣಬು, ಸಕ್ಕರೆ ಮತ್ತು ಸಿಮೆಂಟು ತಯಾರಿಕೆ ಬಹಳ ಮುಂದುವರಿದಿದೆ ಸಣಬಿನ ಗಿರಣಿಗಳು ಒಟ್ಟು 105 ನಮ್ಮ ದೇಶದಲ್ಲಿ ಕಲಸಮಾಡುತ್ತಿವೆ ಆದರೆ ಸಣಬಿನ ಬೆಳೆ ನಮ್ಮ ದೇಶ ಒಂದರಲ್ಲೇ ಆಗುವುದರಿಂದ ಅದರ ಕೈಗಾರಿಕ ನಮ್ಮ ಏಕಾಧಿಕಾರಕ್ಕೆ ಬಹುಮಟ್ಟಿಗೆ ಒಳ ಪಟ್ಟಿರುವುದು ಸಿಮೆಂಟಿನ ತಯಾರಿಕೆ ಈಚೆಗ ಬೆಳೆದು ನಮಗೆ ಬೇಕಾದಷ್ಟೂ ನಮ್ಮ ದೇಶದಲ್ಲೇ ತಯಾರಾಗುತ್ತಿದೆ ಸಕ್ಕರೆ ಯನ್ನು ನಮ್ಮ ದೇಶದಲ್ಲೇ ತಯಾರಿಸಲು ಸಾಕಾದಷ್ಟು ಕಾರ್ಖಾನೆಗಳು ಸ್ಥಾಪಿತವಾಗಿವೆ 1932 ರಿಂದೀಚೆಗೆ ಸರ್ಕಾರ ದವರು ನೀಡಿದ ರಕ್ಷಣೆಯ ಸುಂಕದ ಬೆಂಬಲದಿಂದ ಪರದೇಶ ದಿಂದ ಬರುತ್ತಿದ್ದಷ್ಟು ಸಕ್ಕರೆ ನಮ್ಮ ದೇಶದಲ್ಲೇ ತಯಾರಿಸ ಲನುಕೂಲಿಸಿದ ಈಗ ಒಟ್ಟು 175 ಸಕ್ಕರ ತಯಾರಿಸುವ ಕಾರ್ಖಾನೆಗಳಿರುವುವು ದೇಶದ ಹಿತದಲ್ಲಿ ಕೈಗಾರಿಕೆಯ ರಕ್ಷಣೆ ಯನ್ನು ಸರ್ಕಾರದವರು ಕಾರ್ಯರೂಪಕ್ಕೆ ತಂದರ ಯಾವರೀತಿ ಅಭಿವೃದ್ಧಿ ಸಾಧ್ಯವೆಂಬುದನ್ನು ಸಕ್ಕರೆ ಕೈಗಾರಿಕೆಯ ಬೆಳವಣಿಗೆ ಯಿಂದ ಉದಾಹರಿಸಬಹುದು

ಕಾಗದ, ಗಾಜು, ಸಾಬೂನು, ಮತ್ತು ಔಷಧಿಗಳ ತಯಾರಿಕ ರಸಾಯನ ಶಾಸ್ತ್ರಕ್ಕೆ ಸಂಬಂಧಪಟ್ಟ ಕೈಗಾರಿಕಗಳು, ಇವೆಲ್ಲಾ ಅಲ್ಲಲ್ಲಿ ಆರಂಭವಾಗಿ ಪರದೇಶದ ಸಾಮಾನುಗಳ ಪೈಪೋಟಿಯ ಹೊಡೆತದೊಡನೆ ಹೋರಾಡುತ್ತಿರುವುವು ಈಗ ಯುದ್ಧದ ದೆಸ ಯಿಂದ ಪರದೇಶಗಳ ಸಾಮಾನು ಬರಲು ತೊಂದರೆಯಾಗಿದೆ, ತರುಣಾವಸ್ಥೆಯಲ್ಲಿರುವ ಕೈಗಾರಿಕೆಗಳಿಗೆಲ್ಲಾ ತಮ್ಮ ಸ್ಥಾನವನ್ನು ರೂಢಿಸಿಕೊಂಡು ಊರ್ಜಿತವಾಗಲು ಇದು ಸುಸಮಯ

ನಮ್ಮ ಮುಂದಿನ ಪ್ರಗತಿಗೆ ಮಾರ್ಗದರ್ಶಕವಾದ ನಾಲ್ಕನೆಯ ವಿಷಯ—ದೇಶೀಯ ಸಂಸ್ಥಾನಗಳಲ್ಲಿ ನಡೆದಿರತಕ್ಕ ಕೈಗಾರಿಕೆ ಅಭಿವೃದ್ಧಿಯ ಕೆಲಸಗಳು. ಭರತಖಂಡದಲ್ಲಿ ಬ್ರಿಟಿಷ್ ಸ್ವಾಧೀನದಲ್ಲಿರುವ ಪ್ರಾಂತ್ಯಗಳ ಆಡಳಿತಕ್ಕೂ ದೇಶೀಯ ಸಂಸ್ಥಾನಗಳ ಆಡಳಿತಕ್ಕೂ ಒಂದು ಮುಖ್ಯ ವ್ಯತ್ಯಾಸವಿರುವುದು. ದೇಶೀಯ ಸಂಸ್ಥಾನಗಳಲ್ಲಿ ಸರ್ಕಾರಕ್ಕೂ ಪ್ರಜೆಗಳಿಗೂ ಇರುವುದು ಒಂದೇ ಉದ್ದೇಶ, ಒಂದೇ ಧ್ಯೇಯ. ಬ್ರಿಟಿಷ್ ಪ್ರಾಂತ್ಯಗಳಲ್ಲಿರುವ ಪರಕೀಯ ಭಾವನೆ ದೇಶೀಯ ಸಂಸ್ಥಾನಗಳಲ್ಲಿಲ್ಲ. ಆದುದರಿಂದಲೇ ದೇಶೀಯ ಸಂಸ್ಥಾನಗಳು ಪ್ರಜಾಹಿತದಲ್ಲಿ ಅನೇಕ ಪ್ರಗತಿದಾಯಕವಾದ ಆರ್ಥಿಕ ಉದ್ಯಮಗಳನ್ನು ನಡಸಿಕೊಂಡುಬರುತ್ತಿವೆ. ಪರದೇಶದ ಸಾಮಾನುಗಳ ಪೈಪೋಟಿಯನ್ನು ತಡೆಯಲು ಸುಂಕದ ಮೇಲಾಗಲಿ ವಿನಿಮಯದ ಮೇಲಾಗಲಿ ನಾಣ್ಯ ಮತ್ತು ನೋಟುಗಳ ಚಲಾವಣೆಯಲ್ಲಾಗಲಿ ಯಾವ ಹತೋಟಿಯೂ ದೇಶೀಯಸಂಸ್ಥಾನಗಳಿಗೆ ಇಲ್ಲದಿದ್ದರೂ, ಸರ್ಕಾರದ ಉತ್ತೇಜನ, ತೆರಿಗೆ, ಕಾನೂನು ಮುಂತಾದ ಒಳ ಆಡಳಿತಗಳಲ್ಲಿ ಸ್ವದೇಶೀ ಹಿತರಕ್ಷಣೆಯ ಧೋರಣೆಯನ್ನನುಸರಿಸಲು ಸಂಸ್ಥಾನಗಳಿಗೆ ಸಾಧ್ಯ. ಆದುದರಿಂದಲೇ ದೇಶೀಯ ಸಂಸ್ಥಾನಗಳಲ್ಲಿ ಹಲವು ಈಚಿಗೆ ಕೈಗಾರಿಕೆಯ ಅಭಿವೃದ್ಧಿಯಲ್ಲಿ ಹೆಚ್ಚು ಪ್ರಗತಿಯನ್ನು ತೋರುತ್ತಿರುವುವು. ಹೈದರಾಬಾದು, ಬರೋಡ, ಕಾಶ್ಮೀರ, ತಿರುವಾಂಕೂರು ಕೊಚ್ಚಿ ಮತ್ತು ಮೈಸೂರು ಸಂಸ್ಥಾನಗಳು ಇದಕ್ಕೆ ನಿದರ್ಶನಗಳು. ಇವುಗಳಲ್ಲೆಲ್ಲಾ ನಮ್ಮ ಸಂಸ್ಥಾನವಾದ ಮೈಸೂರು ಅತ್ಯಧಿಕ ಪ್ರಗತಿಯನ್ನು ತೋರಿಸುತ್ತಿರುವುದು ಹೆಮ್ಮೆಯ ವಿಷಯ.

# ೬. ಮೈಸೂರಿನ ಪ್ರಗತಿ

ಮೈಸೂರಿನ ಉನ್ನತಸ್ಥಾನವನ್ನೂ ಆದರ ಪ್ರಗತಿಯನ್ನೂ ಮೈಸೂರು ಮಕ್ಕಳಾದ ನಾವೇ ಸಾರಿದರೆ ಜಂಭದ ಮಾತೆನ್ನುವವರೂ ಇರುವರು ಇತರ ಸಂಸ್ಥಾನಗಳ ಸ್ಥಿತಿಗತಿಗಳನ್ನು ಅರಿತು ಜವಾಬ್ದಾರಿಯಿಂದ ಅಧಿಕಾರಯುತವಾಗಿ ಪ್ರಪಂಚಕ್ಕೆಲ್ಲಾ ತಿಳಿಯುವಂತೆ ಬರೆದಿರುವುದನ್ನು ಅತಿಶಯೋಕ್ತಿ ಎನ್ನಲು ಯಾವ ಕಾರಣವೂ ಇರಲಾರದು 1939 ರಲ್ಲಿ ಪ್ರಕಟವಾದ ಲಂಡನ್ ಟೈಂಸ್ ಪತ್ರಿಕೆಯ ಇಂಡಿಯಾ ವಿಶೇಷ ಸಂಚಿಕೆಯಲ್ಲಿ, "ಇಂಡಿಯಾ ಸಂಸ್ಥಾನಗಳು— ಅವುಗಳ ಉಪಪತ್ತಿಗಳು ಮತ್ತು ಶಕ್ಯತೆಗಳು" ಎಂಬ ಶಿರೋನಾಮೆಯಲ್ಲಿ ಸರ್ ಫ್ರಾಂಕ್ ಬ್ರೌನ್ ಎಂಬವರು ಬರೆಯುತ್ತಾ ಮೈಸೂರಿನ ವಿಷಯದಲ್ಲಿ ಈ ರೀತಿ ಹೇಳಿರುವರು. "ಮನೋರಂಜಕವಾದ ಮೈಸೂರು ದೇಶವು ಆರ್ಥಿಕ ಅಭಿವೃದ್ಧಿ ಮತ್ತು ರಚನಾವ್ಯವಸ್ಥೆಯಲ್ಲಿ ದೇಶೀಯ ಸಂಸ್ಥಾನಗಳೆಲ್ಲಾ ಅಗ್ರಸ್ಥಾನವನ್ನು ಪಡೆದಿದೆ ಇತರ ಸಂಸ್ಥಾನಗಳು ತಮ್ಮ ಕಂದಾಚಾರದ ಜೀವನ ಪದ್ಧತಿಗಳನ್ನು ಬಿಡುವ ಯೋಚನೆಮಾಡುವುದಕ್ಕೆ ಮುಂಚಿತವಾಗಿಯೇ ಈ ಪ್ರಗತಿಸನ್ನಾಹಗಳು ಇಲ್ಲಿ ಆರಂಭವಾದುವು"

ಮೈಸೂರಿನ ಆರ್ಥಿಕ ಬೆಳವಣಿಗೆ ಈ ದೇಶವು ಬ್ರಿಟಿಷರ ವಶದಿಂದ ಶ್ರೀಮನ್ಮಹಾರಾಜರವರ ಆಡಳಿತಕ್ಕೆ 1881 ರಲ್ಲಿ ವರ್ಗವಾದಾಗ ಪ್ರಾರಂಭವಾದುದು ಒಂದೇ ಸಮವಾಗಿ ಸಾಗುತ್ತಿದೆ ಈ ಬೆಳವಣಿಗೆ ಒಂದು ನಿರ್ದಿಷ್ಟವಾದ ಆರ್ಥಿಕ ಧೋರಣೆಯ ಫಲವೆನ್ನಬಹುದು. ಈ ಧೋರಣೆಯ ಕಾರ್ಯಾಚರಣೆಯಲ್ಲಿ ರಚನಾವ್ಯವಸ್ಥೆ ಕಂಡುಬರುವುದು ಉದ್ದೇಶ

ಪೂರ್ವಕ ಧೋರಣೆಯೂ ರಚನಾವ್ಯವಸ್ಥೆಯೂ ಇರುವೆಡೆಯಲ್ಲಿ ಪ್ರಗತಿ ತೋರುವುದು ಸ್ವಭಾವವಾದುದೇ ಅಲ್ಲವೆ?

ಮೈಸೂರು ಸಂಸ್ಥಾನದ ಪ್ರಗತಿದಾಯಕವಾದ ಆರ್ಥಿಕ ಬೆಳವಣಿಗೆಗೆ ಮೊದಲಿಂದಲೂ ಸರಕಾರದವರು ಕೊಟ್ಟಿರುವ ಪ್ರೋತ್ಸಾಹ ಮತ್ತು ಸಹಾಯಗಳೇ ಮೂಲಕಾರಣವೆನ್ನಬೇಕು ದೇಶದ ಆಡಳಿತವು ಬ್ರಿಟಿಷರಿಂದ ಶ್ರೀಮನ್ಮಹಾರಾಜರವರ ವಶಕ್ಕೆ ಬಂದಾಗ ದಿವಾನರಾಗಿದ್ದ ರಂಗಾಚಾರ್ಲು ಅವರು 1881 ನೆಯ ವರ್ಷದ ಪ್ರಜಾಪ್ರತಿನಿಧಿಸಭೆಯಲ್ಲಿ ಆರಂಭಭಾಷಣಮಾಡುತ್ತಾ ಈ ರೀತಿ ನುಡಿದರು "ಇಂಡಿಯಾದೇಶದವರು ಕೃಷಿಯೊಂದರಲ್ಲೇ ಮಗ್ನರಾಗಬೇಕೆಂಬ ಹಳೆಯಕಾಲದ ನಂಬಿಕೆ ತೊಲಗಿ ಕೃಷಿಯನ್ನೂ ಕೈಗಾರಿಕೆಯನ್ನೂ ಸಮಸಮನಾಗಿ ಪೋಷಿಸದಿದ್ದರೆ ಯಾವ ದೇಶವೂ ಮುಂದುವರಿಯುವುದಿಲ್ಲವೆಂಬ ನಂಬಿಕೆಗೆ ಎಡೆಗೊಡುತ್ತಿದೆ ಸರ್ಕಾರದ ಆಡಳಿತಕ್ಕೆ ಸಂಬಂಧಪಟ್ಟ ನಿತ್ಯಗಟ್ಟಳೆಯ ಕಲಸಗಳು ಮಾತ್ರವೇ ಅಲ್ಲ ನಮ್ಮ ಗಮನಕ್ಕೆ ಬರಬೇಕಾದ ವಿಷಯ ನಮ್ಮ ದೇಶದ ಸಂಪದಭಿವೃದ್ಧಿಗೆ ಕಾರಣವಾದ ವಿವಿಧ ಕೈಗಾರಿಕಗಳನ್ನು ಬೆಳೆಯಿಸುವ ವಿಷಯವೂ ಅಷ್ಟೇ ಗಮನಾರ್ಹವಾದುದು ಶ್ರೀಮನ್ ಮಹಾರಾಜರವರ ಸರ್ಕಾರದವರು ಈ ವಿಷಯದಲ್ಲಿ ಯಾವ ಸಲಹೆಗಳು ಬಂದರೂ, ಅವನ್ನೆಲ್ಲಾ ವಿಶದವಾಗಿ ಪರಾಂಬರಿಸಲು ಸದಾ ಸಿದ್ಧರಾಗಿರುವರು"

ಆಗ ಘೋಷಿಸಿದ ಈ ಧೋರಣೆ ಒಂದೇ ಸಮನಾಗಿ ಬೆಳೆದುಬಂದಿದೆ ಇದರ ಪರಿಣಾಮವಾಗಿಯೇ ದಿವಾನ್ ಸರ್ ಕೆ. ಶೇಷಾದ್ರಿ ಐಯರವರ ಕಾಲದಲ್ಲಿ ರೈಲುರಸ್ತೆಗಳು ತಯಾರಾದುವು. 1899 ರಲ್ಲಿ ವಿದ್ಯುತ್‌ಶಕ್ತಿಯ ಕಾರ್ಯಕ್ರಮಗಳು ಪ್ರಾರಂಭಿಸಲ್ಪಟ್ಟುವು ಇವೆಲ್ಲಕ್ಕೂ ಸರ್ಕಾರದವರೇ ಬಂಡವಾಳವನ್ನೊದಗಿಸಿದರು

1903 ರಲ್ಲಿ ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜಒಡೆಯರವರು ಮದ್ರಾಸಿನಲ್ಲಿ ಕೈಗಾರಿಕೆ ವಸ್ತುಪ್ರದರ್ಶನದ ಆರಂಭ ಭಾಷಣದಲ್ಲಿ ಸುವ್ಯವಸ್ಥಿತವಾದ ಕೈಗಾರಿಕೆಗಳ ಬೆಳವಣಿಗೆಯ ಅತ್ಯಾವಶ್ಯಕತೆಯನ್ನು ಒತ್ತಿಹೇಳಿದರು 1911 ರಲ್ಲಿ ಮೈಸೂರು ಇಕನಾಮಿಕ್ ಕಾನ್‌ಫರೆನ್ಸ್ ಎಂಬ ಆರ್ಥಿಕ ರಚನಾಸಂಸ್ಥೆಯೊಂದನ್ನು ಸ್ಥಾಪಿಸಿದರು ಭರತಖಂಡದಲ್ಲೆಲ್ಲಾ ಮೈಸೂರು ದೇಶವೇ ಈ ರೀತಿ ಕೈಗಾರಿಕೆಗಳ ಸುವ್ಯವಸ್ಥಿತ ಬೆಳವಣಿಗೆಗಾಗಿ ಕಾರ್ಯಕ್ರಮವನ್ನನುಸರಿಸುವುದರಲ್ಲಿ ಅಗ್ರಗಾಮಿಯಾಯಿತು ಈ ಸಮಯದಲ್ಲಿಯೇ ಪಕ್ಕದ ಬ್ರಿಟಿಷ್‌ಪ್ರಾಂತ್ಯವಾದ ಮದ್ರಾಸಿನಲ್ಲಿ ಆರಂಭವಾಗಿದ್ದ ಕೈಗಾರಿಕೆಯ ಏಳಿಗೆಯ ಕಾರ್ಯಗಳಿಗೆ ಇಂಡಿಯಾ ಸೆಕ್ರೆಟರಿಗಳಾಗಿದ್ದ ಲಾರ್ಡ್ ಮಾರ್ಲೇ ಅವರ ಅಪ್ಪಣೆಯಿಂದ ಯಾವ ರೀತಿ ಅಡಚಣೆಯುಂಟಾಯಿತೆಂಬುವನ್ನು ನಾವು ಮರೆಯಬಾರದು

ಸರ್ ಎಂ ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲದಲ್ಲಿ ಕೈಗಾರಿಕೆ ಅಭಿವೃದ್ಧಿಕಾರ್ಯಗಳು ಚುರುಕಾಗಿ ನಡೆದುವು. ಹಿಂದಿನವರು ತೋರಿಸಿಕೊಟ್ಟಿದ್ದ ದಾರಿಯಲ್ಲೇ ಮೈಸೂರಿನ ಪ್ರಗತಿಯು ಮುಂದುವರಿಯಿತು ಈಗಿನ ದಿವಾನರಾದ ಸರ್ ಮಿರ್ಜಾ ಎಂ. ಇಸ್ಮಾಯಿಲ್ ಅವರು ಅಧಿಕಾರ ಸೂತ್ರಗಳನ್ನು ವಹಿಸಿಕೊಂಡ ವರುಷ (1926), ಪ್ರಜಾಪ್ರತಿನಿಧಿ ಸಭೆಯ ಮೊದಲನೆಯ ಭಾಷಣದಲ್ಲಿ ಪ್ರಗತಿದಾಯಕವಾದ ಆರ್ಥಿಕ ಧೋರಣೆಯ ಸಾಧನೆಯಲ್ಲಿ ಸರ್ಕಾರದವರ ಹೆಚ್ಚುಬೆಂಬಲವನ್ನು ದೃಢೀಕರಿಸಿದರು ವ್ಯವಸಾಯ, ಗ್ರಾಮಕೈಗಾರಿಕೆಗಳು, ಕಾರ್ಖಾನೆಗಳಲ್ಲಿ ನಡೆಯುವ ದೊಡ್ಡ ಕೈಗಾರಿಕೆಗಳು—ಎಲ್ಲವೂ ದೇಶದ ಜನರ ನಿತ್ಯಜೀವನದ ಸಾಮಗ್ರಿಗಳನ್ನೊದಗಿಸಿಕೊಳ್ಳಲು ಸಾಧನವಾಗುವಂತೆ ರಚನಾಕ್ರಮವನ್ನನುಸರಿಸು

ವುದು ಆರ್ಥಿಕಧ್ಯೇಯವಾಯಿತು ಇದಕ್ಕನುಗುಣವಾಗಿ ರಚನಾವ್ಯವಸ್ಥೆಯನ್ನೇರ್ಪಡಿಸುವುದರಲ್ಲಿ ಸರ್ಕಾರವು ಹೆಚ್ಚು ಜವಾಬ್ದಾರಿಯನ್ನು ವಹಿಸಿ ಮುಂದುವರಿಯಿತು ಸರ್ಕಾರವೇ ಉದ್ಯಮಗಳ ಪೂರ್ಣ ಜವಾಬ್ದಾರಿಯನ್ನು ಹೊತ್ತು ನಡಸು ವುದು, ಸರ್ಕಾರವೂ ಪ್ರಜೆಗಳೂ ಜೆರೆತು ಕೈಗಾರಿಕಗಳನ್ನು ನಡಸುವುದು, ಖಾಸಗಿಯಾಗಿ ನಡೆಯುವ ಉದ್ಯಮಗಳಿಗೆ ವಿವಿಧಸಹಾಯವನ್ನೀಯುವುದು—ಈ ಮೂರು ರೀತಿಯಲ್ಲಿ ಕೈಗಾರಿಕ ಏಳಿಗೆಗೆ ಗಮನಕೊಡಲು ಏರ್ಪಾಟಾಯಿತು. ಮೊದಲನೆಯವೆರಡೂ ಬಹು ಮುಖ್ಯವಾಗಿ ಆಚರಣೆಗೆ ಬಂದುವು ಭರತಖಂಡದ ಈಗಿನ ಸ್ಥಿತಿಯಲ್ಲಿ ಕೈಗಾರಿಕಯ ಬೆಳವಣಿಗೆಗೆ ಸರ್ಕಾರದ ಹೆಚ್ಚು ಸಹಾಯದ ಆವಶ್ಯಕತೆಯನ್ನು ಕುರಿತು ಸರ್ ಮಿರ್ಜಾ ಅವರು 1936 ನೆಯ ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನದ ತಮ್ಮ ಭಾಷಣದಲ್ಲಿ ಈ ರೀತಿ ಹೇಳಿದರು

" ಇಂಗ್ಲೆಂಡಿನಂಥ ದೊಡ್ಡ ದೊಡ್ಡ ಪಾಶ್ಚಾತ್ಯ ದೇಶಗಳ ಮಾತ್ರೇ ಬೇರೆ ಅಲ್ಲಿ ಕೈಗಾರಿಕೆಗಳ ಮತ್ತು ವಾಣಿಜ್ಯದ ದೊಡ್ಡ ದೊಡ್ಡ ಉದ್ಯಮಗಳನ್ನು ಹೂಡಿ ಕೆಲಸ ನಡಸು ವವರು ಮುಖ್ಯವಾಗಿ ಪ್ರಜಾವರ್ಗದವರೇ ಸರಕಾರದವರು ಕೈಹಾಕಬೇಕಾದ ಆಗತ್ಯವೇ ಕಂಡುಬಾರದಂತೆ ಅವರು ವಾಣಿಜ್ಯ ಕೈಗಾರಿಕೆಗಳನ್ನೆಲ್ಲಾ ನಡೆಯಿಸಿಕೊಂಡುಹೋಗು ತ್ತಾರೆ ಆದರೆ ನಮ್ಮ ಭರತಖಂಡದ ವಿದ್ಯಮಾನ ಗಳೇ ಬೇರೆ ಇಲ್ಲಿ ಪ್ರಜಾವರ್ಗದವರು ಭಾರಿಭಾರಿ ಕೈಗಾರಿಕೆಯ ಉದ್ಯಮಗಳನ್ನು ನಡೆಯಿಸುವ ಸಾಹಸದಿಂದ ದೂರವಾಗಿರು ವುದೇ ಸಾಮಾನ್ಯಪರಿಸ್ಥಿತಿ. ಕೈಗಾರಿಕೆಗಳಿಗೆ ಖಾಸಗಿ ಬಂಡವಾಳವು ಒದಗುವುದಂತೂ ಬಹಳ ಕಡಮೆ ಕಾನೂನುಗಳನ್ನು

ರಚಿಸುವುದರಿಂದ ಮಾತ್ರವೇ (ಸರ್ಕಾರಗಳ) ಕರ್ತವ್ಯ ಮುಗಿ ಯುವುದಿಲ್ಲ ವ್ಯಾಪಾರ ಕೈಗಾರಿಕೆಗಳ ಕ್ಷೇತ್ರಗಳಿಗಿಳಿದು ನಾನಾ ಸರಕಾರಗಳೂ ಕೆಲಸ ನಡೆಯಿಸಿ ಅವುಗಳನ್ನು ಅಭಿವೃದ್ಧಿಪಡಿಸ ಬೇಕಾಗಿಯೂ ಇದೆ ಭರತಖಂಡದ ಪರಿಸ್ಥಿತಿ ಹೀಗೆ ಅಸಾ ಧಾರಣವಾಗಿರುವ ಕಾರಣದಿಂದ, ಪ್ರಜಾವರ್ಗದವರೇ ನಡೆಯಿ ಸಬೇಕಾದ ವಾಣಿಜ್ಯ ಕೈಗಾರಿಕೆಗಳಿಗೂ ಸರ್ಕಾರದವರು ಕೈಹಾಕಿ ಹೆಚ್ಚುಹೆಚ್ಚಾಗಿ ಪ್ರವರ್ತಿಸಬೇಕಾದುದು ಯುಕ್ತವಾಗಿಯೂ ಇದೆ, ಅಲ್ಲದೆ ಆವಶ್ಯಕವಾಗಿಯೂ ಇದೆ ಕೈಗಾರಿಕೆಗಳು ಬೇಗ ಬೇಗ ಹೆಚ್ಚಿ ಶೀಘ್ರವಾಗಿ ಅಭಿವೃದ್ಧಿಗೆ ಬರುವಂತೆ ಮಾಡುವುದಕ್ಕಾಗಿ ನಾನಾ ಸರಕಾರಗಳು ಈರೀತಿ ಕೆಲಸಮಾಡ ಬೇಕಾಗಿವೆ ಮೈಸೂರು ಸಂಸ್ಥಾನದಲ್ಲಿ ಕೂಡ ಸರ್ಕಾರದವರು ವರ್ತಿಸುತ್ತಿರುವುದು ಆದೇ ರೀತಿಯಲ್ಲಿ ಪ್ರಜೆಗಳು ನೆರವೇರಿಸ ಬೇಕಾದ ಪ್ರಯತ್ನದಲ್ಲಿ ಸರ್ಕಾರದವರು ಪ್ರವೇಶಿಸಿದ್ದು ಒಂದುವೇಳೆ ಹಾಳತಮೀರಿದ ತಪ್ಪಿತವೆಂದೇ ಭಾವಿಸುವುದಾ ದರೂ ಕೂಡ, ದೇಶಾಭ್ಯುದಯ ಹಿತಕಾರ್ಯವನ್ನು ಸಾಧಿಸುವುದ ಕ್ಕಾಗಿ ಮಾತ್ರವೇ ಇಲ್ಲಿಯ ಸರ್ಕಾರದವರಾದ ನಾವುಗಳು ಆ ತಪ್ಪಿತವನ್ನು ಮಾಡಿದ್ದೇವೆ ”

ಈ ಅಭಿಪ್ರಾಯವನ್ನೇ ರಾಷ್ಟ್ರೀಯ ಆರ್ಥಿಕ ರಚನಾ ವ್ಯವಸ್ಥೆಯ ಸಮಿತಿಯವರು ಅನೇಕರು ಈಚೆಗೆ ಎತ್ತಿಹಿಡಿದು ವಾದಿಸುತ್ತಿರುವುದು ಕೂಡ ಮೈಸೂರಿನ ಪ್ರಗತಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡುತ್ತಿದ

ಕೈಗಾರಿಕೆಯ ಉದ್ಯಮಗಳ ವಿಷಯದಲ್ಲಿ ಮೈಸೂರುದೇಶವು ಭರತಖಂಡದ ಆದರ್ಶಕಾರ್ಯಕ್ಷೇತ್ರವಾಗಿದೆ ಕಳೆದ ಸುಮಾರು ಹತ್ತು ವರುಷಗಳಿಂದೀಚೆಗಂತೂ ಕೈಗಾರಿಕೆಗಳ ಬೆಳವಣಿಗೆ ವಿಸ್ಮಯವನ್ನುಂಟುಮಾಡುತ್ತದೆ ನಮ್ಮ ದೇಶದಲ್ಲಿ ಇರತಕ್ಕ

ಉದ್ಯಮಗಳಲ್ಲಿ, ರೈಲುರಸ್ತೆಗಳಿಗೂ ವಿದ್ಯುಚ್ಛಕ್ತಿಯ ಏರ್ಪಾಟು ಗಳಿಗೂ ಅಧಿಕ ಬಂಡವಾಳಬೇಕಾಗುವುದರಿಂದ ಸರ್ಕಾರವೇ ಅವುಗಳನ್ನು ನಡಸುತ್ತಿದೆ ಅಲ್ಲದೆ ಕಬ್ಬಿಣ, ಉಕ್ಕು, ಸಿಮೆಂಟು, ಗಂಧದ ಎಣ್ಣೆ, ಸಾಬೂನು, ರೇಷ್ಮೆಬಟ್ಟೆ, ಪಿಂಗಾಣಿ ಸಾಮಾನುಗಳು, ಎಲೆಕ್ಟ್ರಿಕ್ ಸಾಮಾನುಗಳು, ಬಣ್ಣ ಮತ್ತು ಅರಗು, ರಸ್ತೆಗೆ ಹಾಕಲು ಟಾರಿನ ತರಹ ಪದಾರ್ಥ, ನೇಗಿಲು ಗಾಣ ಮುಂತಾದ ವ್ಯವಸಾಯ ಮುಟ್ಟುಗಳು, ಕುರ್ಚಿ ಮೇಜು ಇತ್ಯಾದಿ ಮರದ ಸಾಮಾನುಗಳು, ಔಷಧಿಗಳು ಮತ್ತು ವೈದ್ಯ ಸಲಕರಣೆಗಳು, ಜಾನುವಾರುಗಳ ರೋಗನಿವಾರಣ ಧೃತಿಗಳು—ಇವೆಲ್ಲವುಗಳ ತಯಾರಿಕೆಯೂ ಸರ್ಕಾರದ ಪೂರ್ಣ ಸ್ವಾಮ್ಯತೆ ಆಡಳಿತದಲ್ಲಿವೆ ಎರಡನೆಯದಾಗಿ, ಸರ್ಕಾರದವರು ಮತ್ತು ಖಾಸಗಿ ಜನರು ಒಟ್ಟುಗೂಡಿ ಬಂಡವಾಳವನ್ನು ಹಾಕಿ ಸ್ಥಾಪಿತವಾದ ನಿಯಮಿತ ಜವಾಬ್ದಾರಿಯ ಜಾಯಿಂಟ್‌ಸ್ಟಾಕ್ ಕಂಪನಿಗಳು ನಡಸುತ್ತಿರುವ ಉದ್ಯಮಗಳು ಇವುಗಳಲ್ಲಿ ಮುಖ್ಯವಾದುವು—ಸಕ್ಕರೆ, ಕಾಗದ, ಹೊಗೆಸೊಪ್ಪು, ರಸಾಯನ ಧೃತಿಗಳು ಮತ್ತು ಗೊಬ್ಬರ, ವನಸ್ಪತಿ ಎಣ್ಣೆ, ರೇಷ್ಮೆದಾರ, ರೇಷ್ಮೆಮುಡ್ಡಿಯಿಂದ ಸೂಲು, ಕಾಫಿ ಹದಮಾಡುವುದು, ಚಕ್ಕಳ ಹದಮಾಡುವುದು, ಉಪಕರಣಗಳು ಮತ್ತು ಆಯುಧಗಳು, ದೀಪದಕಡ್ಡಿ—ಇತ್ಯಾದಿ ಸಾಮಾನುಗಳ ತಯಾರಿಕೆಯ ಉದ್ಯಮಗಳು ಮೂರನೆಯದಾಗಿ ವಿವಿಧರೀತಿಯ ಸಹಾಯಸಂಪತ್ತುಗಳನ್ನು ಸರ್ಕಾರದಿಂದ ಪಡೆದು ಖಾಸಗಿಯಾಗಿ ನಡೆಯುತ್ತಿರುವ ಉದ್ಯಮಗಳಲ್ಲಿ ಮುಖ್ಯವಾದುವು ಹತ್ತಿಗಿರಣಿ, ಎಲೆಕ್ಟ್ರಿಕ್ ಬಲ್ಬುಗಳ ತಯಾರಿಕೆ, ಮೋಟಾರು ಬ್ಯಾಟರಿಗಳ ತಯಾರಿಕ, ಹೆಂಚಿನ ಕಾರ್ಖಾನೆಗಳು, ರಸಾಯನಶಾಸ್ತ್ರಕ್ಕೆ ಸಂಬಂಧಪಟ್ಟ ಸಾಮಾನುಗಳ ತಯಾರಿಕೆ, ಗಾಜು ಮತ್ತು ಮಣ್ಣಿನ ಕೊಳವಿಗಳ

ತಯಾರಿಕೆ—-ಇವೇ ಮೊದಲಾದವುಗಳು.

ಈರೀತಿ ಕೈಗಾರಿಕೆಗಳ ಮುಂಪೋಟದಲ್ಲಿ ವ್ಯವಸಾಯದ ಮತ್ತು ಗ್ರಾಮಕೈಗಾರಿಕಗಳ ಉತ್ತೇಜನವೂ ಜರುಗುತ್ತಿದೆ ಕಬ್ಬು ಮತ್ತು ಹೊಗೆಸೊಪ್ಪು ರೈತರಿಗೆ ಹೆಚ್ಚಿನ ವರಮಾನ ವನ್ನು ದೊರಕಿಸುವ ಸಕ್ಕರ ಕಂಪನಿಯುವರು ಕೆಲಸ ನಡಸಿದ ಮೊದಲು ಆರುವರ್ಷಗಳಲ್ಲಿ ಕಬ್ಬು ಬೆಳೆದು ಒದಗಿಸಿದ ರೈತರಿಗೆ ಒಂದುಕೋಟಿ ಹದಿನೈದು ಲಕ್ಷ ರೂಪಾಯಿಗಳನ್ನು ಹಂಚಿರು ವರು ಹೊಗೆಸೊಪ್ಪಿನಿಂದ ಮೂರುವರ್ಷಗಳಲ್ಲಿ ರೈತರಿಗೆ ನಾಲ್ಕುಲಕ್ಷ ಎಪ್ಪತ್ತುಸಾವಿರ ರೂಪಾಯಿಗಳು ಹಂಚಿಕೆಯಾಗಿದೆ ನೀರಾವರಿ ಕೆಲಸಗಳು ವೃದ್ಧಿಯಾಗಿವೆ ಹೊಸಬೆಳೆಗಳು ರೈತ ರಲ್ಲಿ ರೂಢಿಗೆ ಬರುತ್ತಿವೆ ಮಾರಾಟದ ಪರಸ್ಪರ ಸಹಾಯ ಸಂಘಗಳೂ ಜಮೀನು ಅಡಮಾನದ ಬ್ಯಾಂಕುಗಳೂ ರೈತರಿಗೆ ಹೊಸದಾರಿಗಳನ್ನು ತೋರಿಸಿವೆ ಖಾದೀಪ್ರಚಾರ, ರೇಷ್ಮೆ ವ್ಯವಸಾಯ, ವಿವಿಧ ಗ್ರಾಮಕೈಗಾರಿಕೆಗಳು, ಜೇನು ಮತ್ತು ಕೋಳಿ ಸಾಕುವುದು—ಇವೆಲ್ಲ ಗ್ರಾಮಗಳಲ್ಲಿ ಹರಡುತ್ತಿವೆ ಗ್ರಾಮಾಂತರಗಳಲ್ಲಿ ವಿದ್ಯುಚ್ಛಕ್ತಿಯು ಬೆಳಕನ್ನು ಕೊಟ್ಟಿರುವುದೂ ಅಲ್ಲದೆ ಹೊಸ ಆರ್ಥಿಕ ಶಕ್ತಿಯನ್ನೂ ಒದಗಿಸಿದೆ

ಹೀಗೆ ಏರ್ಪಡಿಸಿದ ಆರ್ಥಿಕ ವ್ಯವಸ್ಥೆಯನ್ನು ಬಂಡವಾಳ ಪ್ರಭುತ್ವದ ನೀತಿಯಾದ ವಾಣಿಜ್ಯ ಮನೋಭಾವನೆಯಿಂದ ಅವಲೋಕಿಸಿದಲ್ಲಿ ಮೂಲಧನದ ಮೇಲೆ ಸಾಕಷ್ಟು ಬಡ್ಡಿ ಉತ್ಪತ್ತಿಯಾಗುತ್ತಿಲ್ಲವೆಂದು ಕೆಲವೆಡೆಗಳಲ್ಲಿ ದೂರು ಕೇಳಿ ಬಂದಿರುವುದು ಆದರೆ ಪ್ರಜೆಗಳ ಜೀವನಕ್ಕೆ ಅನುಕೂಲವಾಗ ತಕ್ಕ ದೃಷ್ಟಿಯಿಂದ ಪರಿಶೀಲಿಸಿ ನೋಡಿದರ ಮಾಡಿರುವು ದೆಲ್ಲಾ ಯುಕ್ತವಾಗಿದೆ ಎಂದೇ ಹೇಳಬೇಕು. ವಿಚಾರಮಾಡುವ ವರಿಗೆ ಪ್ರತಿಯೊಂದು ವ್ಯವಸ್ಥೆಯಲ್ಲಿಯೂ ಶಾಸ್ತ್ರೀಯವಾದ

ರಚನಾಕ್ರಮ ಕಾಣಬರುವುದು ಪ್ರತ್ಯಕ್ಷವಾಗಿ ಹಣದ ರೂಪ ದಲ್ಲಿ ಹೆಚ್ಚು ಪ್ರತಿಫಲವು ಸಾಧನೆಯಾಗುವುದು ಇನ್ನೂ ಸಾಧ್ಯ ವೆನ್ನುವುದನ್ನು ಯಾರೂ ಇಲ್ಲವೆನ್ನುವುದಿಲ್ಲ ಆದರ ಸಂಪೂರ್ಣ ಆರ್ಥಿಕ ಸ್ವಾತಂತ್ರ್ಯವಿಲ್ಲದಿದ್ದರೂ ನಮ್ಮ ಸಂಸ್ಥಾನದ ಒಳಗೂ ಹೊರಗೂ ಮೈಸೂರು ಸಾಮಾನುಗಳು ಶ್ರೇಷ್ಠವಾದುವೆಂದೂ ಪರದೇಶದ ಅದೇ ತರಹ ಸಾಮಾನುಗಳಿಗಿಂತ ಸುಲಭದರದವು ಗಳೆಂದೂ ಪ್ರಖ್ಯಾತಿ ಪಡೆಯುವ ಮಟ್ಟಿಗೆ ಕೈಗಾರಿಕೆ ಉದ್ಯಮ ಗಳನ್ನು ಬೆಳಸಿಕೊಂಡುಬಂದಿರುವುದು ಸಾಮಾನ್ಯವಾದ ಕೆಲಸ ವಲ್ಲ ಅಲ್ಲದೆ ಪರೋಕ್ಷವಾಗಿ ಕಣ್ಣಿಗ ಗೋಚರವಾಗದ ಪ್ರತಿ ಫಲಗಳು ಹೇರಳವಾಗಿ ದೊರೆತಿವೆ ಜನಗಳಲ್ಲಿ ತಿಳಿವಳಿಕೆ, ನಿರುದ್ಯೋಗಿಗಳಿಗೆ ಉದ್ಯೋಗಗಳನ್ನೊದಗಿಸುವುದು, ಆರ್ಥಿಕ ಹಿತಸಾಧನೆಯಲ್ಲಿ ಒಟ್ಟುಗೂಡಿ ಕೆಲಸ ನಡೆಯಿಸುವುದು— ಎಲ್ಲವೂ ಮೈಸೂರು ಮಕ್ಕಳಿಗೆ ದೊರೆತಿರುವ ಫಲಗಳು ಎಲ್ಲ ಕ್ಕಿಂತಲೂ ಅಮೂಲ್ಯವಾದ ಪ್ರಯೋಜನವೆಂದರೆ ವಿವಿಧ ಕೈಗಾರಿಕೆಗಳ ನಿರ್ವಾಹದಲ್ಲಿ ಕಾರ್ಯದಕ್ಷತೆಯ ಅನುಭವ ಇದು ನಮ್ಮ ಮೈಸೂರಿನ ಅತಿ ಬೆಲೆಬಾಳುವ ಆಸ್ತಿ ಎನ್ನ ಬಹುದು ಪರಕೀಯರ ಸಹಾಯವನ್ನು ಸಂಪೂರ್ಣವಾಗಿ ವರ್ಜಿಸಿ ಸ್ವತಂತ್ರವಾಗಿ ಎಲ್ಲಾ ಕೆಲಸವನ್ನೂ ನಾವೇ ನಿರ್ವಹಿ ಸುವ ಪೂರ್ಣಶಕ್ತಿಯನ್ನು ಪಡೆಯದಿದ್ದರೂ, ನಮ್ಮ ತರುಣ ರಲ್ಲಿ ಅನೇಕರು ಈ ಕಲಸಗಳಲ್ಲಿ ನಿಪುಣರಾಗುತ್ತಿರುವುದನ್ನು ನಾವು ನಿತ್ಯವೂ ನೋಡುತ್ತಿದ್ದೇವೆ ಕಾಲಕ್ರಮದಲ್ಲಿ ಎಲ್ಲಾ ಕಲಸಗಳನ್ನೂ ನಮ್ಮವರೇ ನಿರ್ವಹಿಸುವ ಸುಯೋಗ ಬಂದೇ ಬರುವುದು ಮೈಸೂರು ಮಕ್ಕಳು ಭರತಖಂಡದ ನಾನಾಭಾಗ ಗಳಿಗೆ ನಿಪುಣ ಸಲಹೆಗಾರರಾಗಿ ಹೋಗುವ ಸನ್ನಿವೇಶವೂ ಒದಗುವುದು ಖಂಡಿತ ಮೈಸೂರು ಮಕ್ಕಳು ಭಾರತಮಾತೆಯ

ಆರ್ಥಿಕ ಸ್ವಾತಂತ್ರ್ಯವನ್ನು ರೂಢಿಸುವುದರಲ್ಲಿ ಸಲ್ಲಿಸುವ ಕಾಣಿಕೆ ಈ ರೂಪವನ್ನು ತಾಳುವುದು ಯಾರಿಗೆತಾನೆ ಸಂತೋಷವನ್ನುಂಟುಮಾಡುವುದಿಲ್ಲ

ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದಕ್ಕೆ ಆಶಾಜನಕವಾದ ಸಹಾಯ ಸನ್ನಿವೇಶಗಳು ಹಲವಾರು ಇತರ ವಿಧಗಳಲ್ಲೂ ಮೂಡುತ್ತಿರುವುವು ಆದರೆ ಅವುಗಳನ್ನೆಲ್ಲಾ ಇಲ್ಲಿ ಪ್ರಸ್ತಾಪ ಮಾಡುವ ಉದ್ದೇಶವಿಲ್ಲ ಮುಖ್ಯ ಕಸಬಾದ ವ್ಯವಸಾಯದ ಜೊತೆಗೆ ಕೈಗಾರಿಕೆಯ ಅಭಿವೃದ್ಧಿಯ ಆವಶ್ಯಕತೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಹೆಚ್ಚು ಹೆಚ್ಚಾಗಿ ಕೈಗಾರಿಕೆಗಳ ಕಡೆ ನಮ್ಮ ಮನಸ್ಸೋಡಿದ ಹೊರತು ನಮ್ಮ ದೇಶದ ಆರ್ಥಿಕವ್ಯವಸ್ಥೆ ಸಮತೂಕಕ್ಕೆ ಬರಲಾರದೆಂಬುದನ್ನು ಸೂಚಿಸುವುದೇ ಈ ಲೇಖನದ ಮುಖ್ಯೋದ್ದೇಶ

## ೭. ಉಪಸಂಹಾರ

ನಮ್ಮ ಆರ್ಥಿಕಸ್ಥಿತಿ ಈಗಿರುವ ಹಾಗೆ ಎಂದಿಗೂ ಇರಲಾರದು, ಉತ್ತಮವಾಗುವುದೇನೋ ಖಂಡಿತ ಅಭಿವೃದ್ಧಿಯ ಸೂಚನೆಗಳು ಈಗಾಗಲೇ ಕಾಣಬರುತ್ತಿವೆ ಆದರೆ ನಮ್ಮ ಉದ್ದೇಶ ಜಾಗ್ರತೆ ಕೈಗೂಡಬೇಕಾದರೆ ಬಾಹ್ಯಸಾಧನಗಳನ್ನು ರೂಪುಗೊಳಿಸುವುದರ ಜೊತೆಗೆ ನಮ್ಮ ಜನರ ವ್ಯಕ್ತಿಸಾಮರ್ಥ್ಯವನ್ನೂ ರೂಪುಗೊಳಿಸಬೇಕಾದುದು ಅತಿ ಮುಖ್ಯವಾದ ಕಾರ್ಯ. ನಮ್ಮ ದೇಶದಲ್ಲಿ ಏಳು ಲಕ್ಷಕ್ಕ ಮೇಲ್ಪಟ್ಟು ಹಳ್ಳಿಗಳಿವೆ ಈ ಹಳ್ಳಿಯ ಜನರ ದೇಹದಾರ್ಢ್ಯ, ಮನೋಭಾವನೆ ಮತ್ತು ನೈತಿಕಶಕ್ತಿ ಎಲ್ಲವೂ ಈಗಿನ ಪ್ರಪಂಚದ ವ್ಯವಹಾರಕ್ಕೆ

ತಕ್ಕಂತೆ ದುಡಿಸಲ್ಪಡಬೇಕಾದುದು ಆವಶ್ಯಕ ಎಷ್ಟೇ ಉತ್ತಮ ರೀತಿಯಾದ ಉಪಕರಣಗಳನ್ನು ಒದಗಿಸಿದರೂ ಕೆಲಸಗಾರರ ಸಾಮರ್ಥ್ಯ ಚತುರತೆ ಆಕಾಂಕ್ಷೆಗಳ ಬೆಂಬಲವಿಲ್ಲದೆ ಆರ್ಥಿಕಾಭಿವೃದ್ಧಿ ಅಸಾಧ್ಯ ಕರ್ಮ, ಹಣೆಬರಹ—ಈ ತೆರನಾದ ಮನೋಭಾವವನ್ನು ಭಾರತೀಯರು ಪ್ರಾಪಂಚಿಕ ವ್ಯವಹಾರದಲ್ಲೂ ಇಟ್ಟುಕೊಂಡಿರುವರೆಂದು ಪ್ರತೀತಿಯುಂಟು ಇಂದಿನ ಅಂತರ್ರಾಷ್ಟ್ರೀಯ ಹೋರಾಟದಲ್ಲಿ ತಮ್ಮನ್ನು ಕಾಪಾಡಿಕೊಳ್ಳುವ ಮಟ್ಟಿಗಾದರೂ ವ್ಯವಹಾರನಿಷ್ಠೆ ಇಲ್ಲದ ಜನರ ಪಾಡು ಬಹಳ ದುರವಸ್ಥೆಗೀಡಾಗುವುದು ವಿಜ್ಞಾನಸಾಧನಬಲದಿಂದ ಮನುಷ್ಯನಿಗೆ ಒದಗಿರುವ ಜೀವನದ ಅನುಕೂಲಗಳನ್ನು ವರ್ಜಿಸಿ ಪರ್ಣಶಾಲೆಯ ಸರಳಜೀವನವನ್ನನುಸರಿಸುವುದೆ? ಅಥವಾ ಆ ಸಾಧನಬಲಗಳಿಂದ ದೇಶದ ಸಂಪತ್ತನ್ನು ಹೆಚ್ಚಿಸಿ ಜನರ ವರಮಾನವನ್ನು ವೃದ್ಧಿಪಡಿಸಿ ಸುಖಮಯವಾದ ಬಾಳಿನ ಧ್ಯೇಯವನ್ನನುಸರಿಸುವುದೆ? ಮೋಟಾರುವಾಹನಗಳ ಸೌಕರ್ಯವಿರುವಾಗ ಎತ್ತಿನಬಂಡಿಗಳನ್ನು ಆಶಿಸುವುದೆ? ಇದು ಸಾಧ್ಯವೆ? ಪರ್ಣಶಾಲೆಯ ಸರಳಜೀವನ ಕಲವು ವ್ಯಕ್ತಿಗಳಿಗೆ ಸಾಧ್ಯವಿರಬಹುದು. ಜನಾಂಗವೂ ಆ ಧ್ಯೇಯವನ್ನಿಟ್ಟುಕೊಂಡರೆ, ಅದು ಕಾಲಕ್ರಮದಲ್ಲಿ ನಶಿಸಿಹೋಗುವುದು ಖಂಡಿತ ಸುಖದ ಬಾಳೆಂದರೆ ದುಂದುಗಾರಿಕೆ ಎಂದಾಗಲಿ, ಭೋಗಜೀವನವೆಂದಾಗಲಿ ಅರ್ಥಮಾಡಲಾಗದು ಭಾರತೀಯರು ಸುಖದ ಬಾಳೇನೆಂಬುದನ್ನು ಇನ್ನೂ ತಿಳಿಯಬೇಕಾಗಿದೆ ನಮ್ಮ ಒಡತನವು ಕಟುತರವಾದುದು ನಮ್ಮಲ್ಲಿ ಆಗಾಗ್ಗೆ ಕಾಣಬರುವ ಆರ್ಥಿಕ ಹೋರಾಟಗಳು, ವ್ಯಕ್ತಿಗಳ ಪರಸ್ಪರ ಸಂಬಂಧದಲ್ಲಿ ಆಗಾಗ್ಗೆ ಉಂಟಾಗುವ ದ್ವೇಷಾಸೂಯೆಗಳು—ಇವೆಲ್ಲ ಕೇವಲ ಸಂಕುಚಿತ ಮನೋಭಾವನೆಯ ಪರಿಣಾಮ. ಇದು ಖಂಡಿತ ಬದ

ಲಾವಣೆಯಾಗಬೇಕು ಜೀವನದಲ್ಲಿ ಒಂದು ಉದಾರ ಆಸಕ್ತಿ, ಬಾಳಿನಲ್ಲಿ ಒಂದು ಧ್ಯೇಯ, ಇವುಗಳಿಗೆ ತಕ್ಕಂತ ಪ್ರತಿವ್ಯಕ್ತಿಯ ಜೀವನದಲ್ಲೂ ಕ್ರಮವಾದ ಆರ್ಥಿಕಯೋಜನೆ, ಇದಕ್ಕೆ ಅನುಗುಣವಾದ ಸಾಧನೆಯಲ್ಲಿ ಒಂದು ಕಾರ್ಯದಕ್ಷತೆ—ಎಲ್ಲವೂ ಭಾರತೀಯರಲ್ಲಿ ಅಂಕುರಿಸಬೇಕು ಪರರ ಸಹಾಯವನ್ನವೇಕ್ಷಿಸದೆ ಸ್ವಸಾಮರ್ಥ್ಯದಿಂದ ಜೀವನವನ್ನು ಸುಖಮಯವಾದ ಆರ್ಥಿಕ ಪಥದಲ್ಲಿ ಸಾಗಿಸಲು ಪ್ರತಿಯೊಬ್ಬನೂ ತಯಾರಾಗಬೇಕು ಆಗ ನಮ್ಮ ದೇಶದ ಅಧಿಕ ಪ್ರಜಾಸಂಖ್ಯೆಯ ಬಲ ತಿಳಿಯುವುದು

ಕಡೆಯದಾಗಿ, ಭಾರತೀಯರು ವ್ಯವಹಾರದಲ್ಲಿ ಅಂತರಾಷ್ಟ್ರೀಯಭಾವನೆಯುಳ್ಳವರಾಗಿರಬೇಕಾದರೂ, ತಮ್ಮ ಆರ್ಥಿಕ ಬಲ ಹೆಚ್ಚಿ ಇತರ ರಾಷ್ಟ್ರಗಳ ಮಟ್ಟಕ್ಕೆ ಬರುವವರೆಗಾದರೂ ಉಜ್ವಲ ರಾಷ್ಟ್ರೀಯ ಆರ್ಥಿಕಭಾವನೆಯನ್ನಿಟ್ಟುಕೊಂಡು ವರ್ತಿಸುವುದು ಅತ್ಯಾವಶ್ಯಕ ನಮ್ಮ ಶಕ್ತಿಯನ್ನು ರೂಢಿಸಬೇಕಾದರೆ ಬೇರೆ ಮಾರ್ಗವಿಲ್ಲ ಆರ್ಥಿಕ ಸ್ವಸಾಮರ್ಥ್ಯದಿಂದ ದೇಶಕ್ಕೆ ಬೇಕಾದ ಎಲ್ಲಾ ಸಾಮಗ್ರಿ ಸಲಕರಣೆಗಳನ್ನೂ ನಮ್ಮ ದೇಶದಲ್ಲೇ ಹೊಂದಿಸಿಕೊಳ್ಳುವ ಗುರಿಯನ್ನಿಟ್ಟು ಕೆಲಸ ನಡೆಯಿಸಬೇಕು ಇದರ ಸಾಧನೆಗೆ ಸ್ವದೇಶೀ ಸಾಮಾನುಗಳನ್ನೇ ಸರ್ವಕಾಲದಲ್ಲಿಯೂ ಉಪಯೋಗಿಸುವ ಪ್ರತಿಜ್ಞೆಯನ್ನು ಪ್ರತಿಯೊಬ್ಬ ಭಾರತೀಯನೂ ಕೈಕೊಂಡು ಪಾಲಿಸಬೇಕಾದುದು ಅವನ ಮುಖ್ಯ ಧರ್ಮ